
ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಜುಲೈ 2020 ಮಾಸ ಪತ್ರಿಕೆ

ಸಂಪುಟ/Volume : 42
ಸಂಚಿಕೆ/Issue : 10
ಪುಟ/Pages : 16
ಬೆಲೆ/Price : ₹ 10/–

Akhila Karnataka Shikshaka Samachar | July 2020 | Monthly




A Journal of Karnataka State Secondary Teachers' Association

ಸಂಪಾದಕೀಯ

# ಮನಸ್ಸಿದ್ದರೆ ಮಾರ್ಗ

ಆಗದು ಎಂದು
ಕೈಲಾಗದು ಎಂದು ಕೈಕಟ್ಟಿ ಕುಳಿತರೆ..
ಸಾಗದು ಕೆಲಸವು ಮುಂದೆ
ಮನಸ್ಸೊಂದಿದ್ದರೆ ಮಾರ್ಗವು ಉಂಟು
ಕೆಚ್ಚೆದೆ ಇರಬೇಕೆಂದು, ಕೆಚ್ಚೆದೆ ಇರಬೇಕೆಂದು
ಆಗದು ಎಂದು ।

ಕೆತ್ತಲಾಗದು ಕಗ್ಗಲ್ಲೆಂದು
ಎದೆಗುಂದಿದ್ದರೆ ಶಿಲ್ಪಿ
ಆಗುತ್ತಿತ್ತೇ ಕಲೆಗಳ ಬೀಡು?
ಗೊಮ್ಮಟೇಶನ ನೆಲೆನಾಡು?
ಬೇಲೂರು ಹಳೇಬೀಡು ?
ಬೇಲೂರು ಹಳೇಬೀಡು ?
ಆಗದು ಎಂದು ।

ಮಾಡಲಾಗದು ಕ್ಲಿಷ್ಟವೆಂದು
ಹಿಂದೆ ಸರಿದಿದ್ದರೆ ಶಿಕ್ಷಣ ಮಂತ್ರಿ
ಆಗುತ್ತಿತ್ತೇ ಎಸ್.ಎಸ್.ಎಲ್.ಸಿ ಪರೀಕ್ಷೆ?
ನ್ಯಾಯ ನೀಡಲಾಗುತ್ತಿತ್ತೇ ಮಕ್ಕಳಿಗೆ?
ಮಾದರಿಯಾಗುತ್ತಿದ್ದೆವೆ ರಾಷ್ಟ್ರಕ್ಕೆ?
ಪಾಠ ಮಾಡದೇ ಪಾಠ ಕಲಿಸಲಾಗುತ್ತಿತ್ತೇ?
ಆಗದು ಎಂದು ।

ರಾಜ್ಯದ ಶಿಕ್ಷಣ ಮಂತ್ರಿಗಳಾದ ಶ್ರೀ ಸುರೇಶ್‌ಕುಮಾರ್‌ರವರು ಆಗದು ಎಂದು, ಕೈಲಾಗದು ಎಂದು, ಬೇರೆ ರಾಜ್ಯದವರು ಮಾಡಲಿಲ್ಲವೆಂದು ಕೈಕಟ್ಟಿ ಕುಳಿತಿದ್ದರೆ ಓದಿದ್ದ ಮಕ್ಕಳು, ಕಷ್ಟಪಟ್ಟು ತರಬೇತಿ ನೀಡಿದ ಶಿಕ್ಷಕರು, ಮಕ್ಕಳ ಫಲಿತಾಂಶದ ಬಗ್ಗೆ ನೂರಾರು ಕನಸು ಕಟ್ಟಿದ್ದ ಪೋಷಕರು, ಕರ್ನಾಟಕ ರಾಜ್ಯದವರು ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಯಾವ ನಿರ್ಧಾರ ಕೈಗೊಳ್ಳುತ್ತಾರೆಂದು ಕಾಯುತ್ತಿದ್ದವರಿಗೆಲ್ಲಾ ನಿರಾಸೆಯ ಉತ್ತರವನ್ನು ಕೊಟ್ಟು, ಆರಾಮವಾಗಿ ಇರಬಹುದಿತ್ತೇನೋ? ಎಸ್.ಎಸ್.ಎಲ್.ಸಿ ಪರೀಕ್ಷೆ ಮಾಡಬೇಕೇ? ಮಾಡಬಾರದೇ? ಅನ್ಯ ರಾಜ್ಯದವರು ಮಾಡುವುದಿಲ್ಲವೆಂದು ಕೈಗೊಂಡ ನಿರ್ಧಾರವನ್ನು ಶಿಕ್ಷಣ ಮಂತ್ರಿಗಳಿಗೆ ತಿಳಿಸುತ್ತಾ, ಅವರೆಲ್ಲಾ ಇಂತಹ ಸಂಧಿಗ್ದ ಪರಿಸ್ಥಿತಿಯಲ್ಲಿ ಪರೀಕ್ಷೆ ಬೇಡವೆಂದು ನಿರ್ಧಾರ ಕೈಗೊಳ್ಳುತ್ತಿಲ್ಲವೇ? ನೀವು ಅವರನ್ನೇ ಅನುಸರಿಸಿ ಎಂದು ಪತ್ರಿಕೋದ್ಯಮದವರು ಶಿಕ್ಷಣ ಮಂತ್ರಿಗಳನ್ನು ಪ್ರಶ್ನಿಸಿದಾಗ ಶಿಕ್ಷಣ ಮಂತ್ರಿಗಳು ಹೇಳಿದ ಹೇಳಿಕೆ ನಿಶ್ಚಲವಾದದ್ದು. "ಅನ್ಯ ರಾಜ್ಯದವರು ನಮ್ಮನ್ನು ಅನುಸರಿಸಬೇಕೇ ಹೊರತು ನಾವು ಅವರನ್ನಲ್ಲ" ಎಂದು. ಹಾಗೆಯೇ ಮಾಡಿ ತೋರಿಸಿದರು. ಬೇರೆ ರಾಜ್ಯದವರು ನಾವು ಏಕೆ ಅಂತಹ ಗಟ್ಟಿಯಾದ, ನಿಶ್ಚಲವಾದ ನಿರ್ಧಾರವನ್ನು ಕೈಗೊಳ್ಳುತ್ತಿಲ್ಲವೆಂದು ಕೈ–ಕೈ ಹಿಸುಕಿಕೊಳ್ಳುವಂತೆ ಮಾಡಿದರು, ನಮ್ಮ ಕೆಚ್ಚೆದೆಯ ಶಿಕ್ಷಣ ಮಂತ್ರಿಗಳು.

ನಾವು ಯಾವುದೇ ಒಂದು ಕೆಲಸವನ್ನು ಸರಿಯಾಗಿ ಮಾಡಲು ಆಸಕ್ತಿ ಇರಬೇಕು. ಹಾಗೆ ಆಸಕ್ತಿ ಮೂಡಲು ಆ ಕೆಲಸದ ಬಗ್ಗೆ ನಮಗೆ ಪ್ರೀತಿ ಇರಬೇಕು. ಹಾಗೆ ಆ ಕೆಲಸದಲ್ಲಿ ಪ್ರೀತಿ ಇದ್ದಾಗ, ಸಹಜವಾಗಿಯೇ ಆ ಕೆಲಸ ಯಶಸ್ವಿಯಾಗುತ್ತದೆ.

ಎಸ್.ಎಸ್.ಎಲ್.ಸಿ ಪರೀಕ್ಷೆಯ ಗುರಿಯನ್ನು ತಲುಪಲು ನಮ್ಮ ಶಿಕ್ಷಣ ಮಂತ್ರಿಗಳು ಹತ್ತಿದ ಒಂದೊಂದೇ ಮೆಟ್ಟಿಲನ್ನು ಗಮನಿಸಿದರೆ ನಮಗೆ ಜೀವನದ ಒಂದು ಪಾಠವೇ ದೊರಕುತ್ತದೆ. ಮೊದಲನೇಯದಾಗಿ ಶಿಕ್ಷಣ ಮಂತ್ರಿಗಳು ತಮ್ಮ ಹಿತೈಷಿಗಳು, ಹಿರಿಯರು, ತಜ್ಞರು, ಪ್ರತಿಪಕ್ಷದವರು, ಶಿಕ್ಷಕರು, ಪೋಷಕರು ಮತ್ತು ವಿದ್ಯಾರ್ಥಿಗಳನ್ನೂ ಸಹ ಮಾತನಾಡಿಸಿ, ಎಸ್.ಎಸ್.ಎಲ್.ಸಿ ಪರೀಕ್ಷೆ ಮಾಡಬೇಕೇ? ಬೇಡವೇ? ಎಂಬುದರ ಬಗ್ಗೆ ಅಭಿಪ್ರಾಯ ಸಂಗ್ರಹಿಸಿದರು. ಇವರಲ್ಲಿ ಅನೇಕರು ಮಾಡಿ ಎಂದು ಹೇಳಿದರೆ, ಮತ್ತೇನಕರು ಮಾಡಬೇಡಿ ಎಂದು ಹೇಳಿರಬಹುದು. ನಂತರ ಎಲ್ಲರ ಅಭಿಪ್ರಾಯ ಸಂಗ್ರಹಿಸಿ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ದಿನಾಂಕವನ್ನು ಸಹ ನಿರ್ಧರಿಸಿದರು. ದಿನಾಂಕ ನಿರ್ಧಾರದ ನಂತರವೂ ಸುಮ್ಮನೆ ಕೂರದೇ, ಶಿಕ್ಷಣ ಇಲಾಖೆಯ ಹಾಗೂ ಇತರೇ ಇಲಾಖೆಯ ಅಧಿಕಾರಿಗಳು, ಶಾಸಕರು, ಹಿರಿಯರು ಹೀಗೆ ಎಲ್ಲರನ್ನು ಮುಖತಃ ಭೇಟಿ ಮಾಡಿ ಪರೀಕ್ಷೆ ನಡೆಸುವಾಗ ತೆಗೆದುಕೊಳ್ಳಬಹುದಾದ ಮುನ್ನೆಚ್ಚರಿಕೆಗಳ ಬಗ್ಗೆ ವಿಷಯ ಸಂಗ್ರಹಿಸಿದರು. ನಂತರ ಪ್ರತಿ ಜಿಲ್ಲೆಗೂ ಸ್ವತಃ ಭೇಟಿ ಮಾಡಿ, ತಮ್ಮ ನಿರ್ಧಾರವನ್ನು ತಿಳಿಸಿ, ಪರೀಕ್ಷೆಯ ಸಫಲತೆಗೆ ಎಲ್ಲರ ಸಹಕಾರವನ್ನು ಕೋರುತ್ತಾ ಪರೀಕ್ಷಾ ಮಾರ್ಗಸೂಚಿಗಳನ್ನು ತಿಳಿಸಿದರು. ಹೀಗೆ ಮಾಡುವಾಗ ಎಲ್ಲರನ್ನು ತಮ್ಮ ಕಾರ್ಯದ ಚೌಕಟ್ಟಿನೊಳಗೆ ತಂದರು. ನಂತರವೂ ದೂರದರ್ಶನದ ಅನೇಕ ಸಂದರ್ಶನಗಳಲ್ಲಿ ಪೋಷಕರು, ವಿದ್ಯಾರ್ಥಿಗಳ ಜೊತೆ ಚರ್ಚೆ ನಡೆಸುತ್ತಾ, ಎಲ್ಲರಿಗೂ ಧೈರ್ಯ, ವಿಶ್ವಾಸ ತುಂಬುವ ಕೆಲಸವನ್ನು ಮಾಡಿದರು. ಅನ್ಯ ಇಲಾಖೆಗಳಿಗೂ ಅನೇಕ ಜವಾಬ್ದಾರಿಗಳನ್ನು ವಹಿಸಿದರು. ನೋಡಿ, ನಾವೆಲ್ಲಾ ಗಮನಿಸಬೇಕಾದುದು ಏನೆಂದರೆ ಯಾರನ್ನು ಸಹ ಈ ಕಾರ್ಯದ ಚೌಕಟ್ಟಿನ ಹೊರಗಿಡದೆ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವುದರಿಂದಲೇ ಕಾರ್ಯದ ಅರ್ಧ ಯಶಸ್ಸನ್ನು ಪಡೆದುಕೊಂಡರು.

ನಮಗೆ ಗೊತ್ತಿದ್ದಂತೆ ಪ್ರತಿದಿನವೂ ಅನೇಕ ಶಿಕ್ಷಕರನ್ನು ದೂರವಾಣಿ ಮುಖಾಂತರ ಮಾತನಾಡಿಸಿ ಗ್ರೌಂಡ್ ರಿಪೋರ್ಟ ಪಡೆಯುತ್ತಿದ್ದುದಲ್ಲದೇ, ಅವರ ಅಭಿಪ್ರಾಯವನ್ನು ಸಂಗ್ರಹಿಸುತ್ತಿದ್ದರು. ಇಂತಹ ಸಂಧಿಗ್ದ ಪರಿಸ್ಥಿತಿಯಲ್ಲಿ ಪರೀಕ್ಷೆ ಬೇಡವೆಂದು ತನ್ನದೇ ಅಭಿಪ್ರಾಯವನ್ನು ಹೇಳಿದ ವಿದ್ಯಾರ್ಥಿನಿಗೆ ಏನೂ ಆಗುವುದಿಲ್ಲ, ಧೈರ್ಯವಾಗಿ ಪರೀಕ್ಷೆ ಬರೆ ಎಂದು ಧೈರ್ಯ ತುಂಬಿದ್ದಲ್ಲದೇ, ಪರೀಕ್ಷೆ ಮುಗಿದ ಬಳಿಕವೂ ಅದೇ ವಿದ್ಯಾರ್ಥಿನಿಗೆ ದೂರವಾಣಿ ಕರೆ ಮಾಡಿ, ಪರೀಕ್ಷೆ ಹೇಗೆ ಬರೆದೇ? ಎಂದು ಕೇಳಿ ಫಲಿತಾಂಶ ಬಂದ ಬಳಿಕ ಸಿಹಿಯನ್ನು ಕೊಡಲೂ ಹೇಳಿದರು. ಹೇಗಿದೆ ನೋಡಿ ನಮ್ಮ ಶಿಕ್ಷಣ ಮಂತ್ರಿಗಳ ಕಾರ್ಯವೈಖರಿ.

ಈ ಕಾರ್ಯದಲ್ಲಿ ನಾವು ಒಂದು ಹಂತದಲ್ಲಿ ಮೆಚ್ಚಬೇಕಾದದ್ದು ಶಿಕ್ಷಣ ಇಲಾಖೆಯ ಪ್ರತಿಯೊಬ್ಬರನ್ನು. ಅವರೆಲ್ಲರಿಗೂ ಸಹ ಅನೇಕ ಸಂಶಯಗಳಿದ್ದವು. ಆದರೆ ಈಗಿನ ಅತಿ ಹೆಚ್ಚು ಶಿಕ್ಷಕರೆಲ್ಲರೂ ಶಿಕ್ಷಣ ಮಂತ್ರಿಗಳಾದ ಶ್ರೀ ಸುರೇಶ್‌ಕುಮಾರ್‌ರವರನ್ನು ತಮ್ಮ ನಾಯಕನೆಂದು ಸ್ವೀಕಾರ ಮಾಡಿದ್ದಾರೆ. ನಾಯಕನಾದವನು ಯಾವುದೇ ಕಾರ್ಯ ಕೈಗೊಳ್ಳುವ ಮೊದಲು ಆ ತಂಡದವರೆಲ್ಲರೆದುರು ಕಾರ್ಯದ ಆಗು–ಹೋಗುಗಳ ಬಗ್ಗೆ, ಸಫಲತೆ–ಅಸಫಲತೆ ಬಗ್ಗೆ ಚರ್ಚಿಸುತ್ತಾನೆ. ಎಲ್ಲರಿಗೂ ತಮ್ಮ ಅಭಿಪ್ರಾಯ ನೀಡಲು ಅವಕಾಶವನ್ನು ನೀಡುತ್ತಾನೆ. ಆದರೆ ನಾಯಕನಾದವನು ಒಂದು ನಿರ್ಧಾರವನ್ನು ಕೈಗೊಂಡನೆಂದರೆ ಏನೇ ಆಗಲಿ ಎಲ್ಲರೂ ಹೆಗಲಿಗೆ ಹೆಗಲು ಕೊಟ್ಟು ಆ ಕಾರ್ಯದ ಯಶಸ್ಸಿಗೆ ಶ್ರಮಿಸುತ್ತಾರೆ. ಇಲ್ಲಿಯೂ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟ ಪ್ರತಿಯೊಬ್ಬರು ತಮ್ಮ ಸ್ವಂತ ಮನೆಯ ಕಾರ್ಯವೇನೋ ಎಂಬಂತೆ ಮುತುವರ್ಜಿ ವಹಿಸಿದರು. ಹಾಗೆಯೇ ಕಾರ್ಯವೂ ಪೂರ್ಣ ಸಫಲತೆಯನ್ನು ಪಡೆಯಿತು.

ಅನೇಕ ಇಲಾಖೆಗಳ ಸಹಕಾರ ಪಡೆದು, ಶಿಕ್ಷಣ ಮಂತ್ರಿಗಳು ಹಿಡಿದ ಛಲವನ್ನು ಬಿಡದೇ, ಸಾಧನೆಗೆ ಅಸಾಧ್ಯವಾದದ್ದು ಯಾವುದೂ ಇಲ್ಲ, ಮನಸ್ಸಿದ್ದರೆ ಮಾರ್ಗ ಎಂಬ ಪಾಠವನ್ನು ಯಾವುದೇ ತರಗತಿ ತೆಗೆದುಕೊಳ್ಳದೇ ಎಲ್ಲಾ ಶಿಕ್ಷಕರಿಗೂ, ಎಲ್ಲಾ ಇಲಾಖೆಗಳಿಗೂ ಮಾಡಿದ್ದಾರೆ. ಇಂತಹ ಶಿಕ್ಷಣ ಮಂತ್ರಿಗಳನ್ನು ಪಡೆದ ಶಿಕ್ಷಣಕ್ಷೇತ್ರ ಧನ್ಯ.

ಸಂಪಾದಕ

# ‘ನಾನು’ ಕಳಚಿ ನಾವು ನಮ್ಮದೆಂಬ ಭಾವ ಜಾಗೃತವಾಗಲಿ



**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

ಕಳೆದ ಮೂರ್‍ನಾಲ್ಕು ತಿಂಗಳಿಂದ ಪತ್ರಿಕೆಯ ತುಂಬ ಕರೋನಾ ಎಂಬ ಪ್ರಾಣ ಹಿಂಡುವ ದೈತ್ಯನ ಸುದ್ದಿಯೇ. ಪ್ರತಿನಿತ್ಯ ದಿನ ಪತ್ರಿಕೆಯನ್ನು ತೆರೆದರೆ, ಈ ರಕ್ತಬೀಜಾಸುರನ ಅಂಕಿ ಅಂಶಗಳ ದರ್ಶನ. ಅಮೆರಿಕೆಯಲ್ಲಿ ಹತ್ತು ಲಕ್ಷ ದಾಟಿತು. ಸ್ಪೈನ್, ಇಟಲಿ, ಇಂಗ್ಲೆಂಡ್, ಬ್ರೆಜಿಲ್ ಭಾರತ ಹೀಗೆ ಖಂಡಾಂತರಗಳನ್ನು ದಾಟಿ ಈ ಚೀನೀ ರಾಕ್ಷಸನ ಅಟ್ಟಹಾಸ. ಇದರ ಪರಿಣಾಮವನ್ನು ತಿಳಿಯಲು ಈ ಲೇಖನದ ಪ್ರಯತ್ನ.

ಚೈನಾದಲ್ಲಿ ರಸ್ತೆ ರಸ್ತೆಗಳಲ್ಲಿ ಹೆಣಗಳು ಬಿದ್ದುದನ್ನು ಟಿವಿಯಲ್ಲಿ ಕಂಡಿದ್ದೇವೆ. ಇದೇ ದೃಶ್ಯ ಹಲವು ದೇಶಗಳಲ್ಲಿ ಘಟಿಸಿದೆ. ಸತ್ತ ಶವಗಳನ್ನು ಮುಟ್ಟಲೂ ಹೆದರಿಕೆ, ಎಲ್ಲೆಡೆ ಭಯದ ವಾತಾವರಣ. ಪರಿಣಾಮ ಸಂಬಂಧಗಳ ನಾಶ. ಮಾನವ ಸಂಬಂಧಗಳ ಕೊಂಡಿಯೇ ಕಳಚುತ್ತಿದೆ. ಎಲ್ಲಿಯವರೆಗೆ ಅಂದರೆ ಸ್ವಂತ ಬಂಧು ಬಾಂಧವರು, ತಂದೆ, ತಾಯಿ, ಅಣ್ಣ, ತಂಗಿ, ಅಕ್ಕ, ತಮ್ಮ ಎನ್ನುವ ರಕ್ತ ಸಂಬಂಧಗಳೂ ಮಾಸಿದ ಬಟ್ಟೆಯಂತೆ ಹರಿದು ಹೋಗುತ್ತಿದೆ. ನಾನು ಬದುಕಿದರೆ ಸಾಕು, ಇನ್ನೊಬ್ಬರ ಗೊಡವೆ ನನಗೇಕೆ? ಎಂಬ ‘ಸ್ವಕೇಂದ್ರ’ ಭಾವ ಕರೋನಾದಂತೆಯೇ ಹಬ್ಬುತ್ತಿದೆ. ಇಂದು ಇದು ಜಗತ್ತಿನ ಸ್ಥಿತಿ. ಈ ದೃಶ್ಯ ಬಿಟ್ಟು ಮತ್ತೊಂದು ದೃಶ್ಯ ನಿಮಗೆ ತೆರೆದಿಡುತ್ತೇನೆ ಅದು ಭಾರತದಲ್ಲಿನ ದೃಶ್ಯ.

ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಸಹಸ್ರಾರು ತರುಣರು ತಮ್ಮ ಜೀವದ ಹಂಗನ್ನು ತೊರೆದು, ಕೈಯಲ್ಲಿ ದಿನಸಿಯ ಮೂಟೆಹೊತ್ತು– ಪ್ರತಿಷ್ಠಿತರು ಆ ದಿಕ್ಕಿನಲ್ಲಿ ತಲೆ ಹಾಕಿ ಮಲಗಲೂ ಇಷ್ಟ ಪಡದ ಸ್ಲಂಗಳಿಗೆ ತೆರಳಿ ಅಲ್ಲಿ ಬಡವರಿಗೆ ಅದನ್ನು ಹಂಚುತ್ತಿದ್ದಾರೆ. ಗುಳೆ ಹೊರಟ ಕೂಲಿಕಾರ್ಮಿಕರಿಗೆ ಬಸ್‌ನಿಲ್ದಾಣದಲ್ಲಿ ರೈಲ್ವೆ ಸ್ಟೇಷನ್‌ಗಳಲ್ಲಿ ಊಟದ ಪ್ಯಾಕೆಟ್ ಕೊಡುತ್ತಿದ್ದಾರೆ. ಪಶು–ಪಕ್ಷಿಗಳಿಗೂ ಆಹಾರ ಒದಗಿಸುತ್ತಿದ್ದಾರೆ. ಆಸ್ಪತ್ರೆಗಳಿಗೆ ಹೋಗಿ ಅಲ್ಲಿನ ಸಿಬ್ಬಂದಿಗೆ ಸಹಾಯಹಸ್ತ ಚಾಚುತ್ತಿದ್ದಾರೆ. ಇಷ್ಟೇ ಅಲ್ಲ ಸನಾಥರಿಂದಲೂ ತಿರಸ್ಕರಿಸಿದ ಅನಾಥ ಶವಗಳಿಗೆ ಅಂತ್ಯ ಸಂಸ್ಕಾರವನ್ನೂ ಮಾಡುತ್ತಿದ್ದಾರೆ. ಇದೆಲ್ಲಾ ಸೇವಾಕಾರ್ಯಗಳು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ. ಪತ್ರಿಕೆಗಳಲ್ಲಿ, ಟವಿ ಚಾನೆಲ್ಲುಗಳಲ್ಲಿ ತಮ್ಮ ಫೋಟೋ ಬರಬೇಕೆಂಬ ಬಯಕೆ ಇಲ್ಲದೆ! ಕೆಲವು ರಾಜಕಾರಣಿಗಳು ಭವಿಷ್ಯತ್ತಿನ ಮೇಲೆ ಕಣ್ಣಿಟ್ಟು ಹೀಗೂ ಮಾಡಿದ್ದುಂಟು. ಕಾಸು ಕೊಟ್ಟು ಪತ್ರಿಕೆಗಳಲ್ಲಿ ಫೋಟೋ ಸಮೇತ ಪ್ರಚಾರ ಗಿಟ್ಟಿಸಿಕೊಂಡದ್ದೂ ಉಂಟು. ಇವರನ್ನು ಬಿಡಿ ಇವರ ಬಗ್ಗೆ ನಾನು ಹೇಳುತ್ತಿಲ್ಲ. ಆ ಜನರೇ ಬೇರೆ? ಆದರೆ ಇವರು ಮಾಡಿದ ಕೆಲಸಗಳ ಗಾತ್ರ ನಿಮಗೆ ಅರಿವಾಗಲೆಂದು ಅದರ ಅಂಕಿ– ಸಂಖ್ಯೆ ನೀಡುತ್ತೇನೆ. ‘ಸೇವಾಭಾರತ’ ಎಂಬ ಬ್ಯಾನರ್ ಅಡಿಯಲ್ಲಿ ವಿವಿಧ ಊರುಗಳಲ್ಲಿ 12 ಲಕ್ಷಕ್ಕೂ ಹೆಚ್ಚು ಕುಟುಂಬಗಳಿಗೆ ಆಹಾರದ ಕಿಟ್‌ಗಳನ್ನು ವಿತರಿಸಿದರು. ಅಗತ್ಯವಿರುವ 75 ಲಕ್ಷ ಜನರಿಗೆ ಆಹಾರ ಪೊಟ್ಟಣ ತಲುಪಿಸಿದ್ದಾರೆ. ಸುಮಾರು 7–8ಲಕ್ಷ ‘ಮುಖಗವಸು’ಗಳನ್ನು ವಿತರಿಸಿದ್ದಾರೆ. ಅಲೆಮಾರಿಗಳನ್ನು ಹುಡುಕಿಕೊಂಡು ಹೋಗಿ ಅವರ ಅಗತ್ಯಗಳನ್ನು ಪೂರೈಸಿದ್ದಾರೆ. ಭಿಕ್ಷೆ ಬೇಡಿ ಬದುಕುವ, ಬೀದಿ ಬದಿಯಲ್ಲಿ ಮಲಗುವ ಜನರೂ ಕೊನೆಗೆ ದೇವಸ್ಥಾನದ ಬಳಿ ಆಹಾರಕ್ಕಾಗಿ ಓಡಾಡುವ ಕೋತಿಗಳು, ಬೀಡಾಡಿ ದನಗಳೂ ಈ ತರುಣರ ಸೇವಾಭಾಗ್ಯವನ್ನು ಪಡೆದಿವೆ. ಇದು ಒಂದೆರಡು ದಿನ ಮಾಡಿ ಬಿಟ್ಟ ಕೆಲಸವಲ್ಲ, ಸತತವಾಗಿ ದಿನಗಟ್ಟಲೆ, ವಾರಗಳ ಕಾಲಮಾಡಿದ ಸೇವಾಕಾರ್ಯ.

> **ನಾನು ಎಂಬುದು ಮರೆತು**
> **ನನ್ನಿಂದಲೇ ಎಂಬುದು ತೊರೆದು,**
> **ನಾವು ಎಂಬುದು ನೆನೆದು**
> **ನಮ್ಮಿಂದ ಎಂಬುದು ಮನಸಿಟ್ಟು**
> **ಎಲ್ಲರೊಳಗೊಂದಾಗಿ ಬದುಕಿದರೆ**
> **ಅದುವೇ ನಿಜವಾದ ಸಾಧನೆ**

ಯಾರಿವರು? ಸ್ವಂತದವರಿಗೇ ಸಹಾಯ ಮಾಡಲು ಹಿಂಜರಿಯುವ ಈ ದಿನಗಳಲ್ಲಿ ಈ ರೀತಿ ಕೆಲಸ ಮಾಡಲು ಇವರಿಗೆ ಪ್ರೇರಣೆಯಾದರೂ ಹೇಗೆ ಬಂತು? ಹೌದು, ಇದು ನಿಜಕ್ಕೂ ಕೇಳಬೇಕಾದ ಪ್ರಶ್ನೆಯೇ, ಉತ್ತರಿಸಲೇಬೇಕಾದ ಪ್ರಶ್ನೆ.

ಈ ರೀತಿ ಸಮಾಜ ಸೇವೆಯ ದೀಕ್ಷೆಯನ್ನು ಸ್ವೀಕರಿಸಿ, ಆತ್ಮ ಸಂತೋಷಕ್ಕಾಗಿ ಕೆಲಸ ಮಾಡಿದ ಈ ಜನ ನಮ್ಮ ನಿಮ್ಮಂತೆ ಇದೇ ಭಾರತೀಯ ಸಮಾಜದಿಂದ ಬಂದವರು. ಅವರೂ ಸಹ ಮನೆಮಠ, ತಂದೆತಾಯಿ, ಅಕ್ಕತಮ್ಮ, ಹೆಂಡತಿ, ಮಕ್ಕಳೆಂಬ ಪರಿವಾರ ಉಳ್ಳವರು. ಆದರೆ ಅವರಿಗೆ ಸ್ವಕೇಂದ್ರಿತ ವೃತ್ತಾಕಾರದ ಜೀವನ ನಡೆಸಬೇಕೆಂಬುದರ ಬದಲಿಗೆ ಸುರಳಿಯಾಕಾರದ ಜೀವನ ನಡೆಸಬೇಕೆಂಬ ಸಂಸ್ಕಾರ ಸಿಕ್ಕಿತು. ಸುರುಳಿಯು ಮುಚ್ಚಿದ ವೃತ್ತದಂತಲ್ಲದೆ ತೆರೆದ ಚಕ್ರಾಕಾರ. ತಾನು, ತನ್ನ ಪರಿವಾರ, ತನ್ನ ಜಾತಿ, ಭಾಷೆ, ಸುತ್ತಲಿನ ತನ್ನೂರು ಪ್ರಾಂತ, ದೇಶ, ತನ್ನ ಸಮಾಜ ಎಂದು ವಿಶ್ವದ ಎಲ್ಲೆಯವರೆಗೆ ತೆರೆದುಕೊಳ್ಳುತ್ತಾ ಸಾಗುತ್ತದೆ. ಹುಟ್ಟಿ ಬೆಳೆದ ಈ ಭಾರತೀಯ ಸಮಾಜದ ಘಟಕ ನಾನು ಈ ಸಮಾಜದ ಎಲ್ಲರೂ ನನ್ನ ಬಂಧುಗಳು ಎಂಬ ಭಾವ ಹುಟ್ಟುತ್ತದೆ. ಭಾವ ಬಲಿತಂತೆ ಸಂಬಂಧಗಳು ಬೆಸೆಯುತ್ತವೆ. ಆಗ ಜಾತಿ, ಮತ, ಧರ್ಮಗಳ ಅಡ್ಡಗೋಡೆ ಎದುರುನಿಲ್ಲದೆ ಬಸವಣ್ಣನವರೆಂದಂತೆ ‘ಇವ ನನ್ನವ ಇವನನ್ನವ ಎಂಬ ಭಾವವೇ

**ಪುಟ 4 ಕ್ಕೆ** ➢

➢ ಪುಟ 3 ರಿಂದ.....

ಹೃದಯದ ಮಿಡಿತವಾಗುತ್ತದೆ'. ಹೀಗಾದಾಗ ತಾನುದಿಸಿದ ಸಮಾಜಕ್ಕಾಗಿ ಎಲ್ಲವನ್ನೂ ತ್ಯಾಗಮಾಡುವ ಬುದ್ಧಿ ಬರುತ್ತದೆ. ಈ ಬುದ್ಧಿ ಬಂದಿದ್ದರಿಂದಲೇ ಕೊರೋನ ಕಾಟದಲ್ಲಿ ಸಾವಿರಾರು ತರುಣರು 'ಸಮರ್ಥಭಾರತ' ದ ಅಡಿಯಲ್ಲಿ ಸಮಾಜಸೇವೆಗೆ ಟೊಂಕ ಕಟ್ಟಿನಿಂತದ್ದು.

ನೀವು ಕೇಳುವ ಮುಂದಿನ ಪ್ರಶ್ನೆ? ನಾನು ಊಹಿಸಬಲ್ಲೆ. ಇಂಥ ಶಿಕ್ಷಣ ಈ ತರುಣರಿಗೆ ಸಿಕ್ಕದ್ದಾದರೂ ಎಲ್ಲಿ? ಎಂಬುದೇ ಅಲ್ಲವೇ ನಿಮ್ಮ ಪ್ರಶ್ನೆ?

ಈ ಪ್ರಶ್ನೆಗೆ ಉತ್ತರಿಸುವ ಮುನ್ನ ನಿಮಗೊಂದು ವಿಷಯ ತಿಳಿಸಲೇಬೇಕು. ಸೇವಾಮನೋಭಾವ ನಮ್ಮೀ ಸಮಾಜದಲ್ಲಿ ಅಂತರ್ನಿಹಿತವಾಗಿದೆ. ಅದು ಬೂದಿ ಮುಚ್ಚಿದ ಕೆಂಡದಂತೆ. ಬೂದಿಯನ್ನು ಊದಿದರೆ ಕೆಂಡ ಪ್ರಜ್ವಲಿಸುತ್ತದೆ


ಬೂದಿ ಊದುವ ಈ ಕೆಲಸವನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘ (RSS) ಎಂಬ ಸಂಘಟನೆ ಕಳೆದ 95 ವರ್ಷಗಳಿಂದ ಮಾಡುತ್ತಿದೆ. ಇದರ ಸಂಪರ್ಕಕ್ಕೆ ಬಂದವರಿಗೆ ಅದು ನೀಡುತ್ತಿರುವ ಶಿಕ್ಷಣವೆಂದರೆ ತಮ್ಮ ಜೀವನವನ್ನು ಸುರುಳಿಯಾಕಾರಗೊಳಿಸಿಕೊಳ್ಳುವುದು. ಈ ಸಂಸ್ಕಾರ ಸಿಕ್ಕವರನ್ನು ಸ್ವಯಂಸೇವಕರೆಂದು ಕರೆಯುತ್ತಾರೆ. ಯಾರದೇ ಒತ್ತಡವಿಲ್ಲದೆ, ಪ್ರತಿಫಲಾಪೇಕ್ಷೆ ಇಲ್ಲದೆ ಸ್ವಯಂ ಪ್ರೇರಣೆಯಿಂದ ಸಮಾಜದ ಸೇವೆ ಮಾಡುವವರೇ ಈ ಸ್ವಯಂಸೇವಕರು. 'ನಾನು' ಎಂಬ ಭಾವ ಕಳಚಿ 'ನಾವು' ಎಂಬ ಭಾವ ಮೈಗೂಡಿಸಿಕೊಂಡವರು. ಆದ್ದರಿಂದಲೇ ಈ ದೇಶಕ್ಕೆ ಸಂಕಟ ಬಂದಾಗಲೆಲ್ಲಾ, ಅದು ಪ್ರವಾಹದಿಂದಾಗಲೀ, ಭೂಕಂಪ, ಸುನಾಮಿಯಿಂದಲಾಗಲಿ ಈಗಿನ ಕರೋನಾದಿಂದಾಗಲೀ ಈ ಸ್ವಯಂಸೇವಕರು ತಾವಾಗಿ ಒಗ್ಗೂಡಿ ಪೀಡಿತರ ಸಹಾಯಕ್ಕೆ ಧಾವಿಸುತ್ತಾರೆ.

RSS ಹೊರತಾಗಿ ನಮ್ಮ ಸಮಾಜದ ಅನೇಕ ಮಠ ಮಂದಿರಗಳು, ಸ್ವಯಂ ಸೇವಾಸಂಸ್ಥೆಗಳು ದುಃಖಿತರ ಕಣ್ಣೀರೊರೆಸುವ ಪ್ರಯತ್ನ ಮಾಡಿದೆ. ಇಷ್ಟೇ ಅಲ್ಲ ಸಾವಿರಾರು ಪೊಲೀಸರು, ವೈದ್ಯರು, ಶುಷ್ರೂಶಕರು, ಆರೋಗ್ಯ ಸಿಬ್ಬಂದಿ, ಪೌರಕಾರ್ಮಿಕರು ತಮ್ಮ ಜೀವನದ ಹಂಗನ್ನು ತೊರೆದು ಈ ಸಂಕಟದ ಸಮಯದಲ್ಲಿ ಜನರ ಸೇವೆ ಮಾಡಿದ್ದಾರೆ. ಇವರನ್ನು ನಮ್ಮ ಪ್ರಧಾನಿಯವರು "ಕರೋನಾ ವಾರಿಯರ್ಸ್" ಎಂದು ಕರೆದಿರುವುದು ಅತ್ಯಂತ ಸಮರ್ಪಕವಾಗಿದೆ. ಇವರನ್ನೆಲ್ಲಾ ನಾವು ತಂಪು ಹೊತ್ತಿನಲ್ಲಿ ನೆನೆಸಿಕೊಳ್ಳಲೇಬೇಕು.

ನಾವು ನಿತ್ಯ ದೇವರಲ್ಲಿ ಪ್ರಾರ್ಥನೆ ಮಾಡುವಾಗ, ಈ ರೀತಿ ನಿಸ್ವಾರ್ಥ ಭಾವದಿಂದ ಈ ಸಂಕಟದ ಸಮಯದಲ್ಲಿ ಸಮಾಜದಲ್ಲಿನ ಪೀಡಿತರ ಸೇವೆಯನ್ನು ಮಾಡುತ್ತಿರುವ ಎಲ್ಲರಿಗೂ ಆಯುರಾರೋಗ್ಯಭಾಗ್ಯ ಕರುಣಿಸಲೆಂದು ಪ್ರಾರ್ಥಿಸೋಣ.

●

# ಗುರುವಂದನಾ ಕಾರ್ಯಕ್ರಮ



ದಿನಾಂಕ 9-7-2020ರ ಗುರುವಾರ ಸಂಜೆ 4-30ಕ್ಕೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಬೆಂಗಳೂರು ದಕ್ಷಿಣ ಜಿಲ್ಲೆಯಿಂದ ಗುರುವಂದನಾ ಕಾರ್ಯಕ್ರಮವನ್ನು ಗೂಗಲ್ ಮೀಟ್ ಆ್ಯಪ್‌ನಲ್ಲಿ ಏರ್ಪಡಿಸಲಾಗಿತ್ತು. ಸಂಘದ ಬಹುತೇಕ ಪದಾಧಿಕಾರಿಗಳೆಲ್ಲರೂ ಭಾಗವಹಿಸಿದ್ದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ದಕ್ಷಿಣ ಜಿಲ್ಲೆಯ ಅಧ್ಯಕ್ಷರಾದ ಶ್ರೀಯುತ ಸುರೇಂದ್ರ ಬಿ ಎ ರವರ ಉಸ್ತುವಾರಿಯಲ್ಲಿ ಶಾರದಾ ಸ್ತುತಿಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಅಧ್ಯಕ್ಷರಾದ ಶ್ರೀ ಸುರೇಂದ್ರರವರು ಕಾರ್ಯಕ್ರಮಕ್ಕೆ ಎಲ್ಲರನ್ನೂ ಸ್ವಾಗತಿಸುತ್ತ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಮುಖ್ಯ ಭಾಷಣಕಾರರಾದ ಶ್ರೀ ರಾಜಮೋಹನ ಕಟ್ಟೆಪುರ, ಪ್ರಚಾರಕರು, ರಾಷ್ಟ್ರೀಯ ಸ್ವಯಂಸೇವಕ ಸಂಘ ಇವರು ತಮ್ಮ ಭಾಷಣದಲ್ಲಿ ವ್ಯಾಸ ಪೂರ್ಣಿಮೆಯ ಮಹತ್ವ, ನಮ್ಮ ಭಾರತೀಯ ಗುರುಪರಂಪರೆಯಲ್ಲಿ ವ್ಯಾಸರನ್ನು ಶ್ರೇಷ್ಠ ಗುರುಗಳೆಂದು ಪರಿಗಣಿಸುವ ಕಾರಣದ ಬಗ್ಗೆ ಸವಿಸ್ತಾರವಾಗಿ ತಿಳಿಸಿಕೊಟ್ಟರು. ಇದಲ್ಲದೆ ಇಂದಿನ ಗುರುಶಿಷ್ಯರ ಸಂಬಂಧ ಹೇಗಿದೆ? ನಿಜವಾದ ಗುರುಶಿಷ್ಯನ ಸಂಬಂಧ ಹೇಗಿರಬೇಕು ಎಂಬುದನ್ನು ಎಲ್ಲರಿಗೂ ಮನಮುಟ್ಟುವ ರೀತಿಯಲ್ಲಿ ಮಾತನಾಡಿದರು. ಹಿಂದೂ ಧರ್ಮ ಮತ್ತು ಬೌದ್ಧ ಧರ್ಮಗಳಲ್ಲಿ ಪರಂಪರಾಗತವಾಗಿ ನಡೆದುಕೊಂಡು ಬಂದಿರುವ ಗುರುವಿನ ಮಹಾನತೆಯನ್ನು ತಿಳಿಸಿಕೊಟ್ಟರು.

ಮುಖ್ಯ ಭಾಷಣಕಾರರ ಭಾಷಣದ ನಂತರ ಶ್ರೀಯುತ ನಾಗಭೂಷಣಜಿರವರು ಗುರುಪೂರ್ಣಿಮೆಯ ಶ್ರೇಷ್ಠತೆಯ ಬಗ್ಗೆ ಮಾತನಾಡಿದರು. ನಂತರ ಶಾಸಕರಾದ ಶ್ರೀಯುತ ಎ.ದೇವೇಗೌಡರು ಮಾತಾನಾಡಿ ನಮ್ಮ ಶಿಕ್ಷಕ ಸಂಘವನ್ನು ಅಭಿನಂದಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಿದಾನಂದ ಪಾಟೀಲರವರು ವಂದನಾರ್ಪಣೆ ಮಾಡಿದರು. ಶಾಂತಿ ಮಂತ್ರದೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

ಇಂದಿನ ಕೊರೋನಾ ಸಂಕಟ ಪರಿಸ್ಥಿತಿಯಲ್ಲಿ ಗೂಗಲ್ ಮೀಟ್ ಆ್ಯಪ್‌ನಲ್ಲಿ ಏರ್ಪಡಿಸಲಾದ ಗುರು ವಂದನಾ ಕಾರ್ಯಕ್ರಮ ಅಭೂತಪೂರ್ವ ಯಶಸ್ಸನ್ನು ತಂದಿತೆಂದು ತಿಳಿಸಲು ಹರ್ಷವೆನಿಸುತ್ತದೆ.

# ಜ್ಞಾನಾರ್ಜನೆಗೆ ದಾರಿದೀಪಗಳು



**ನಂ. ನಾಗಲಕ್ಷ್ಮಿ**
**ನಿವೃತ್ತ ಕನ್ನಡ ಉಪನ್ಯಾಸಕರು,**
**ಸರ್ಕಾರಿ ಪ.ಪೂ. ಕಾಲೇಜು,**
**ಬೆಂಗಳೂರು**

'ನ ಹಿ ಜ್ಞಾನೇನ ಸದೃಶಂ'. ಶಿಕ್ಷಣವೆಂದರೆ ಮಾನವೀಯತೆಯ ವಿಕಾಸ. ಮನುಷ್ಯರಲ್ಲಿ ಪರಿಪೂರ್ಣತೆಯನ್ನು ತಂದುಕೊಡುವುದೇ ಶಿಕ್ಷಣ. ಶಿಕ್ಷಣ ಜೀವನದ ಬೆಳಕು. ಶಿಕ್ಷಣದೊಂದಿಗೆ ಧಾರ್ಮಿಕ ವಿಚಾರಗಳ ಸಮನ್ವಯವಾದಾಗಲೇ ಅದು ಪರಿಪೂರ್ಣವೆನಿಸುವುದು.

ಹೀಗೆ ಜ್ಞಾನಕ್ಕೆ ಸಂಬಂಧಿಸಿದಂತೆ ನಮ್ಮ ಭಾರತೀಯ ಸಂಸ್ಕೃತಿಯ ಪರಂಪರೆಯ ಭಂಡಾರದಲ್ಲಿರುವ ಅಮೃತನುಡಿಗಳು ಎಲ್ಲ ಕಾಲಕ್ಕೂ ಮಾನವ ಜೀವನದ ಸಾರ್ಥಕತೆಗೆ ದಾರಿ ದೀಪಗಳೆನಿಸಿಕೊಂಡಿವೆ. ಧಾರ್ಮಿಕ, ನೈತಿಕ, ಆಧ್ಯಾತ್ಮಿಕ ಎಂಬ ಅಂಶಗಳು ಪರಸ್ಪರ ಸಮನ್ವಯತೆಯೊಂದಿಗೆ ನಮ್ಮ ಜ್ಞಾನ ಸಂಪಾದನೆಗೆ ಉತ್ತಮವೂ, ಭದ್ರವೂ ಆದ ಅಸ್ತಿಭಾರವನ್ನು ಹಾಕುತ್ತಾ ಬಂದಿರುವುದೆಂಬ ಸತ್ಯವೂ ನಮ್ಮ ಪರಂಪರೆಯ ಅಧ್ಯಯನದಿಂದ ತಿಳಿಯುತ್ತದೆ. ಅಂದರೆ, ಭಾರತೀಯ ಸಂಸ್ಕೃತಿಯ ಪ್ರತಿಯೊಂದು ಅಂಗದ ಮೂಲ ಬೇರು ಧರ್ಮದ ಸಹಭಾಗಿತ್ವದೊಂದಿಗೆ ಅದಕ್ಕೂ ಹೆಚ್ಚಾಗಿ ಧರ್ಮವೆಂಬ ಆಧಾರ ಸ್ತಂಭದಲ್ಲಿಯೇ ಇಳಿದಿರುವುದು ಸರ್ವವಿದಿತ. ಬದುಕಿನಲ್ಲಿ ಸಂಸ್ಕಾರವೆಂಬ ಪ್ರಕ್ರಿಯೆಗೆ ಅತ್ಯಗತ್ಯ ಅಂಶವಾಗಿರುವ ಜ್ಞಾನಾರ್ಜನೆಯ ಕಾರ್ಯದಲ್ಲಿ ಈ ಧರ್ಮವೆಂಬುದು ಬಹು ಮಹತ್ತ್ವದ ಪಾತ್ರವನ್ನು ವಹಿಸುತ್ತದೆ. ಈ ಸತ್ತ್ವದೊಂದಿಗೆ ಪಡೆಯುವ ಶಿಕ್ಷಣವೇ ವ್ಯಕ್ತಿಯನ್ನು ದೇಶದ ಸುಭದ್ರ, ಶ್ರೀಮಂತ ಆಸ್ತಿಯನ್ನಾಗಿ ರೂಪಿಸುತ್ತದೆ.

ಈ ಧರ್ಮದ ಲಕ್ಷಣಗಳನ್ನು ಧರ್ಮಶಾಸ್ತ್ರದ ಗ್ರಂಥಗಳಲ್ಲಿ ತಿಳಿಸಲಾಗಿದೆ.

**ಧೃತಿಕ್ಷಮಾ ದಮೋಸ್ತೇಯಂ**
**ಶೌಚಮಿಂದ್ರಿಯನಿಗ್ರಹಃ**
**ಧೀರ್ವಿದ್ಯಾಸತ್ಯಮಕ್ರೋಧೋ**
**ದಶಕಂ ಧರ್ಮಲಕ್ಷಣಂ**

ತೃಪ್ತಿ, ಸಹಿಷ್ಣುತೆ, ಮನೋನಿಗ್ರಹ, ಶೌಚ, ಆಕ್ರಮಣರಾಹಿತ್ಯ, ಜ್ಞಾನ, ಪ್ರಾಮಾಣಿಕತೆ, ಇಂದ್ರಿಯನಿಗ್ರಹ, ವಿದ್ಯಾಬುದ್ಧಿಗಳು ಧರ್ಮಲಕ್ಷಣಗಳು. ಮತ್ತೊಂದು ಪ್ರಸಿದ್ಧ ಹೇಳಿಕೆಯಲ್ಲಿ "ತನಗೆ ನೋವುಂಟುಮಾಡುವಂತಹ ಕಾರ್ಯಗಳನ್ನು ಇತರರ ವಿಷಯದಲ್ಲಿಯೂ ಮಾಡಬಾರದು. ಇದೇ ಧರ್ಮಸರ್ವಸ್ವ". ಯಾವ ರೀತಿಯಲ್ಲಿ ನಮ್ಮ ಗುರಿಯನ್ನಿಟ್ಟು ಕೊಂಡಿರಬೇಕೆಂದು ಕೂಡ 'ನಿತ್ಯನೀತಿ' ಎಂಬ ಗ್ರಂಥದಲ್ಲಿ ಹೇಳಿದೆ.

**ಯೇನಕೇನ ಪ್ರಕಾರೇಣ।**
**ಯಸ್ಯ ಕಸ್ಯಾಪಿ ದೇಹಿನಃ।**
**ಸಂತೋಷಂ ಜನಯೇತ್ಪ್ರಾಜ್ಞ।**
**ತದೇವೇಶ್ವರ ಪೂಜನಂ॥**

ಇತರರಿಗೆ ಸಂತೋಷವನ್ನುಂಟುಮಾಡುವುದೇ ನಮ್ಮ ಬಾಳಿನ ಗುರಿಯಾಗಿರಬೇಕು.

ಮಾನವನಿಗೆ ಜ್ಞಾನ ಇರಬೇಕು, ಅದಕ್ಕೆ ಧರ್ಮ ತುಂಬಿದ ಬಾಳು ಗುರಿಯಾಗಬೇಕು ಇವೆಲ್ಲ ಜೀವನ ಮೌಲ್ಯಗಳನ್ನು ತಿಳಿಯುವುದೇ ಶಿಕ್ಷಣದ ಉದ್ದೇಶವಾಗಿರುತ್ತದೆ. ಅಲ್ಲಿಗೆ ವ್ಯಕ್ತಿತ್ವವನ್ನು ಸಂಸ್ಕರಿಸಿಕೊಳ್ಳಲು ನೆರವಾಗುವುದೇ ಈ ಶಿಕ್ಷಣ ಎಂದಾಯಿತು.

ಶಿಕ್ಷಣದ ಕ್ಷೇತ್ರದಲ್ಲಿ ಧರ್ಮದ ಸ್ಥಾನವೇನೆಂಬುದನ್ನು ತಿಳಿದಾಗ ನಮ್ಮ ದೇಶದಲ್ಲಿ ಈ ಧರ್ಮವೆಂಬ ಜ್ಞಾನಜ್ಯೋತಿಯ ಕಿರಣಗಳು ಎಲ್ಲೆಲ್ಲಿ ಬೆಳಗುತ್ತಿದ್ದವೆಂಬುದೂ ಕೂಡ ಗಮನಿಸುವ ಅಂಶವಾಗಿದೆ. ಪ್ರತಿಯೊಂದು ಊರಿನಲ್ಲಿ ಇರುತ್ತಿದ್ದ ದೇವಸ್ಥಾನಗಳು ಜನಸಾಮಾನ್ಯರ ಶಿಕ್ಷಣ ಕೇಂದ್ರಗಳಾಗಿರುತ್ತಿದ್ದವು. ನಮ್ಮ ಶಾಸನಗಳಲ್ಲಿ ನಮ್ಮಲ್ಲಿದ್ದ ಶಿಕ್ಷಣ ವ್ಯವಸ್ಥೆಯನ್ನು ಕುರಿತು ಬೆಳಕು ಚೆಲ್ಲುವ ಹಲವು ವಿವರಗಳು ಲಭ್ಯವಿದೆ. ಪ್ರಾಥಮಿಕ ಶಿಕ್ಷಣ ಕನ್ನಡದಲ್ಲಿಯೂ, ಉಚ್ಚ ಶಿಕ್ಷಣ ಸಂಸ್ಕೃತದಲ್ಲಿಯೂ ನಡೆಯುತ್ತಿತ್ತೆಂದು ತಿಳಿಸಲಾಗಿದೆ.

ಶಿಕ್ಷಣ ಕೇಂದ್ರಗಳಾಗಿ ಘಟಿಕಗಳು, ಅಗ್ರಹಾರಗಳು, ಮಠಗಳು, ದೇವಸ್ಥಾನಗಳು ಕಾರ್ಯನಿರ್ವಹಿಸುತ್ತಿದ್ದವು. ಸಾಮಾನ್ಯವಾಗಿ ದೇವಸ್ಥಾನಗಳಲ್ಲಿ ಹಳ್ಳಿಯ ಸಾಮಾನ್ಯ ಜನರಿಗೆ ರಾಮಾಯಣ, ಮಹಾಭಾರತದ ಕಥೆಗಳನ್ನು ಓದುತ್ತ ಊರಿನ ಪುರಾಣಿಕರು ವಿವರಿಸುತ್ತಿದ್ದರು. ಅಲ್ಲಿ ಕೇವಲ ಕಥೆಮಾತ್ರ ಹೇಳುತ್ತಿರಲಿಲ್ಲ, ಅದರೊಂದಿಗೆ ಜನರಿಗೆ ನೈತಿಕ ಶಿಕ್ಷಣವೂ ದೊರೆಯುತ್ತಿತ್ತು. ಅನಕ್ಷರಸ್ಥರೇ ಬಹುಪಾಲು ಇರುತ್ತಿದ್ದ ಆ ಸಭಿಕರಿಗೆ ನ್ಯಾಯ, ನೀತಿ, ಧರ್ಮ, ಅಧರ್ಮ ಮುಂತಾದ ಗುಣಗಳ ಸ್ವಭಾವಗಳ ಜೊತೆಗೆ ಪರೋಪಕಾರದ ದಯೆ, ಕರುಣೆ ಮುಂತಾದ ಮಾನವೀಯ ಅಂಶಗಳ ಪರಿಚಯವೂ ಕೂಡ ಕಥೆಯ ಪಾತ್ರಗಳ, ಘಟನೆಗಳ ಮೂಲಕ ತಿಳಿಯುವ ಅವಕಾಶ ದೊರೆಯುತ್ತಿತ್ತು.

ಸುಮಾರು ಏಳು ದಶಕಗಳ ಹಿಂದೆ ಕರ್ನಾಟಕದ ಒಂದು ಹಳ್ಳಿಯಲ್ಲಿ ಒಬ್ಬ ಜಲಗಾರ ತನ್ನೂರಿನ ಹನುಮನ ಗುಡಿಯಲ್ಲಿ ನಡೆಯುತ್ತಿದ್ದ ಪುರಾಣಶ್ರವಣವನ್ನು ಪ್ರತಿ ದಿನ ತನ್ನ ಕೆಲಸದ ನಂತರ ಕೇಳುತ್ತ ಕೇಳುತ್ತ, ಬದಲು ಮಾಡುತ್ತ ಮಾಡುತ್ತ ಅತ್ಯಂತ ಸುಸಂಸ್ಕೃತ ವ್ಯಕ್ತಿಯಾಗಿ, ಇಡೀ ಹಳ್ಳಿಗೆ ಒಬ್ಬ ಮಾದರಿ ವ್ಯಕ್ತಿಯಾದನೆಂದು ಪ್ರತ್ಯಕ್ಷದರ್ಶಿಯಿಂದ ನಾನು ಕೇಳಿದ್ದು ನೆನಪಿದೆ. ಅಂದರೆ ಅನಕ್ಷರಸ್ಥರಾದವರೂ ಸಹ ದೇವಸ್ಥಾನಗಳಲ್ಲಿ ನಡೆಯುತ್ತಿದ್ದ ಪುರಾಣಕಥೆಗಳ ಓದುವಿಕೆಯಿಂದ ಪ್ರಭಾವಿತರಾಗಿ, ಅಜ್ಞಾನವನ್ನು ಕಳೆದುಕೊಂಡು ಸಮಾಜದಲ್ಲಿ ಒಬ್ಬ ಆರೋಗ್ಯವಂತ, ಸಂಸ್ಕಾರವಂತ ಮನುಷ್ಯನಾಗಿ ಬದುಕುವಂತಾಗುತ್ತಿತ್ತು.

ಇನ್ನು ಅದೇ ದೇವಸ್ಥಾನಗಳಲ್ಲಿ ಅದೇ ಮಹಾಕಾವ್ಯಗಳ ಕಥೆಗಳನ್ನು, ಅಲ್ಲಿನ ಘಟನೆಗಳನ್ನು ಶಿಲ್ಪದಲ್ಲಿ ಕೆತ್ತಲಾಗುತ್ತಿದ್ದು ಪುರಾಣಿಕರು ಹೇಳಿದ್ದ ಕಥೆಗಳನ್ನು ಚಿತ್ರರೂಪದಲ್ಲಿ ಚೆನ್ನಾಗಿ ತಿಳಿದುಕೊಳ್ಳಲಾಗುತ್ತಿತ್ತು. ಹಾಗಾಗಿ ಕೇಳಿದ್ದ ವಿಚಾರಗಳೆಲ್ಲವೂ ಮನಸ್ಸಿನಲ್ಲಿ ಸ್ಪಷ್ಟವಾಗಿ ಉಳಿಯುವಂತಾಗುತ್ತಿತ್ತು. ಜನರಿಗೆ ಅದರೊಂದಿಗೆ ಆ ಶಿಲ್ಪಗಳಲ್ಲಿನ ಕೆತ್ತನೆಯ ಕಾರ್ಯದ ಬಗ್ಗೆ, ಆ ಕಲೆಯ ಬಗ್ಗೆ, ಅಲ್ಲಿ ಕಂಡುಬರುತ್ತಿದ್ದ ನೃತ್ಯ, ಸಂಗೀತ, ನಾಟಕ ಮುಂತಾದ ಕಲೆಗಳನ್ನು ಮೆಚ್ಚುವಂತೆ ಉತ್ತಮ ಅಭಿರುಚಿಯನ್ನು ಮೂಡಿಸುತ್ತಿದ್ದವು.

**ಪುಟ 6 ಕ್ಕೆ ➤**

➢ ಪುಟ 5 ರಿಂದ.....

ದೇವಸ್ಥಾನಗಳಲ್ಲಿ ನಡೆಯುತ್ತಿದ್ದ ಪ್ರಾಥಮಿಕ ವಿದ್ಯಾಭ್ಯಾಸದ ವ್ಯವಸ್ಥೆಗೆ 'ಕರ್ಣಾಟ ಶಿಕ್ಷೆ' ಅಥವಾ ಬಾಲಶಿಕ್ಷೆ' ಎಂದು ಕರೆಯಲಾಗುತ್ತಿತ್ತು, ಇಲ್ಲಿ 'ಶಿಕ್ಷೆ' ಎಂದರೆ 'ಶಿಕ್ಷಣ' ಎಂದೇ ಅರ್ಥ. ಇಂದಿನ ವ್ಯಾಖ್ಯಾನವಲ್ಲ. ಉಪಾಧ್ಯಾಯರಿಗೆ 'ಕನ್ನಡ ಪಂಡಿತ' ಎನ್ನುತ್ತಿದ್ದರು. ಈ ಉದ್ದೇಶಕ್ಕಾಗಿ ಬೇರೆ ಶಿಕ್ಷಕರು ಲಭ್ಯವಾಗದ ಸಂದರ್ಭದಲ್ಲಿ ಪುರಾಣಿಕರನ್ನು ಅಥವಾ ಸಹ ಪ್ರಾಧ್ಯಾಪಕರನ್ನು ಈ ಕಾರ್ಯದಲ್ಲಿ ಹೆಚ್ಚುವರಿ ಕರ್ತವ್ಯವೆಂದು ವಹಿಸಿಕೊಡುತ್ತಿದ್ದರು. ತುಮಕೂರು ಜಿಲ್ಲೆಯ 'ಶೆಟ್ಟಿಕೆರೆ' ಎಂಬ ಗ್ರಾಮದಲ್ಲಿ ಅಲ್ಲಿನ ಪುರಾಣಿಕರಿಗೆ ಸಾಯಂಕಾಲ 4 ಘಳಿಗೆ ಅಥವಾ ಸುಮಾರು 1 1/2ಗಂಟೆಗಳ ಕಾಲ ಪುರಾಣಗಳನ್ನು ಓದುವುದಕ್ಕಾಗಿ ಮತ್ತು ಮಿಕ್ಕ ಹಗಲಿನ ವೇಳೆಯಲ್ಲಿ ಮಕ್ಕಳಿಗೆ ಪಾಠವನ್ನು ತಪ್ಪದೆ ಹೇಳುವ ಜವಾಬ್ದಾರಿ ಇರುತ್ತಿತ್ತು. ಇದಕ್ಕಾಗಿ ಅವರಿಗೆ ಸೌಲಭ್ಯ ಒದಗಿಸಲು ಒಂದಷ್ಟು ಭೂಮಿಯನ್ನು ನೀಡಲಾಗುತ್ತಿತ್ತು. –ಶಾಸನದ ಆಧಾರದಿಂದ

ದೇವಸ್ಥಾನಗಳ ಹಾಗೆಯೇ ವೀರಶೈವರ ಮಠಗಳು ಕೂಡ ಶಿಕ್ಷಣಕ್ಕೆ ವಿಶೇಷ ಉತ್ತೇಜನವನ್ನು ನೀಡುತ್ತಿದ್ದವು. ಅದರಲ್ಲಿಯೂ 11–12ನೇ ಶತಮಾನದಲ್ಲಿ ಈ ಮಠಗಳಲ್ಲಿ ಕನ್ನಡ ಭಾಷೆಯ ಶಿಕ್ಷಣಕ್ಕೆ ಮಹತ್ತ್ವ ನೀಡಲಾಗಿತ್ತು. ಬಸವೇಶ್ವರರೇ ಆದಿಯಾಗಿ ವಚನಕಾರರು, ಶಿವಶರಣರು ತಮ್ಮ ತತ್ತ್ವಗಳ ಉಪದೇಶದ ಕಾರ್ಯದಲ್ಲಿ ಜನಸಾಮಾನ್ಯರನ್ನು ತಲುಪುವುದು ಅವರದೇ ಭಾಷೆಯಾದ ಕನ್ನಡದಿಂದ ಸುಲಭವೆಂದು ಕಂಡುಕೊಂಡಿದ್ದರು. ಭಕ್ತಿಯ ಮಹತ್ತ್ವವನ್ನು ತಿಳಿಸುವುದರೊಂದಿಗೆ ಜನರಿಗೆ ಕಾಯಕದ ಮಹತ್ತ್ವವನ್ನೂ ಬೋಧಿಸಲಾಗುತ್ತಿತ್ತು.

ಅರ್ಚಕರು ಅಥವಾ ಜಂಗಮರ ಹೊರತಾಗಿ ಅನ್ಯರು ಯಾರೂ ಇತರರ ದುಡಿಮೆಯಲ್ಲಿ ಬದುಕಬಾರದೆಂದೂ ಅದು ಮಹಾಪಾಪವೆಂದೂ ತಿಳಿಸಲಾಗುತ್ತಿತ್ತು. ಇವೆಲ್ಲದರಿಂದ ಅವರ ಧರ್ಮದ ಪ್ರಸಾರ, ಸಾಮಾಜಿಕ ಸುಧಾರಣೆ ಮತ್ತು ಶಿಕ್ಷಣಕ್ಕೆ ಏಕಕಾಲದಲ್ಲಿ ಮಠಗಳು ಸೇವೆ ಸಲ್ಲಿಸುವಂತಾಗಿತ್ತು. ಗುರುವಿಗೆ ಈ ಮಠಗಳಲ್ಲಿ ಅತ್ಯಂತ ಪ್ರಮುಖ ಸ್ಥಾನವನ್ನು ನೀಡಲಾಗುತ್ತಿತ್ತು.

ವೀರಶೈವ ಮಠಗಳಲ್ಲಿ ಮೂರು ವಿಧಗಳಿರುತ್ತಿದ್ದವು. ವಿರಕ್ತಮಠ, ಓದಿಸುವ ಮಠ ಎಂದು. ಮೊದಲನೆಯದರಲ್ಲಿ ಧರ್ಮ ಮತ್ತು ವೇದಾಂತದ ತತ್ತ್ವಗಳನ್ನು ಬೋಧಿಸುತ್ತಿದ್ದರು. ಎರಡನೆಯದರಲ್ಲಿ ಬೋಧನೆ, ಅಂದರೆ, ಓದುವುದು, ಬರೆಯುವುದು ಮುಂತಾದವನ್ನು ಕಲಿಸುವುದು. ಮೂರನೆಯದರಲ್ಲಿ ಓದು, ಬರಹದ ಜೊತೆಗೆ ಲೆಕ್ಕ ಪತ್ರಗಳ ವ್ಯವಹಾರವನ್ನೂ ಕಲಿಸಲಾಗುತ್ತಿತ್ತು. ಅಂದರೆ ಜನರಿಗೆ ಧಾರ್ಮಿಕ ವಿಚಾರಗಳೊಂದಿಗೆ ಲೌಕಿಕ ವ್ಯವಹಾರಗಳ ಅರಿವನ್ನೂ ಮೂಡಿಸಲಾಗುತ್ತಿತ್ತು.

ಮಠಗಳು ಶಿಕ್ಷಣ ಕೇಂದ್ರಗಳಾಗಿ ಜ್ಞಾನಾರ್ಜನೆಯೆಂದು ಕೇವಲ ಪುಸ್ತಕಜ್ಞಾನವನ್ನು ಮಾತ್ರ ನೀಡದೆ ಜನರಿಗೆ ವೃತ್ತಿ ಶಿಕ್ಷಣದ ಮಹತ್ತ್ವವನ್ನೂ ತಿಳಿಸಿ ಅವುಗಳನ್ನೂ ಕಲಿಸುವ ಕಾರ್ಯವನ್ನೂ ಮಾಡುತ್ತಿದ್ದವು. ನೂಲುವುದು, ನೇಯವುದು, ಸಾಮಾನ್ಯ ವೈದ್ಯಕೀಯ ಜ್ಞಾನ, ವ್ಯವಸಾಯ ಶಾಸ್ತ್ರ ಹೀಗೆ ಜೀವನ ನಿರ್ವಹಣೆಯ ಮಾರ್ಗಗಳ ಕುರಿತು ತಿಳಿಸಿ, ಅಂತಹ ವೃತ್ತಿಗಳನ್ನು ಕಲಿಸುವುದರ ಜೊತೆಗೆ ಆ ಮಠಗಳಲ್ಲಿ ಅಂಗಸಾಧನೆಯ ಪ್ರಾಮುಖ್ಯವನ್ನೂ ಮನಗಂಡು, ಶಿಕ್ಷಣದ ಪಠ್ಯವಸ್ತುವಿನಲ್ಲಿ ವಿಶೇಷ ಸ್ಥಾನವನ್ನು ನೀಡಿದ್ದರೆಂದು ಶಾಸನಗಳ ಮೂಲಕ ತಿಳಿದುಬರುತ್ತದೆ. ಎಲ್ಲ ಕಲಿಕೆಯ ಕಾರ್ಯದಲ್ಲಿ ಜನಸಾಮಾನ್ಯರ ಆಡುನುಡಿಯಾದ ಕನ್ನಡಭಾಷೆಯೇ ಇರಬೇಕೆಂದು ಶಿಕ್ಷಣದ ಮಾಧ್ಯಮವನ್ನಾಗಿ ಪರಿಗಣಿಸಿದ್ದರೆಂದೂ ತಿಳಿಯುತ್ತದೆ.

ಬಸವಣ್ಣನವರು, ಅಲ್ಲಮ ಪ್ರಭುಗಳು ಮುಂತಾದ ಅನೇಕ ಹಿರಿಯ ವಚನಕಾರರ ಮಾರ್ಗದರ್ಶನದಲ್ಲಿ ಅನುಭವ ಮಂಟಪವು ಸದಾಕಾಲ ಜ್ಞಾನಪಿಪಾಸುಗಳಿಗೆ ಉತ್ತಮ ರೀತಿಯಲ್ಲಿ ಅರಿವು ನೀಡುವ ಮಹಾವಿದ್ಯಾಲಯವೇ ಆಗಿತ್ತು. ನೂರಾರು ಮಂದಿ ಅಲ್ಲಿಗೆ ಬಂದು ಆಧ್ಯಾತ್ಮಿಕ, ಸಾಮಾಜಿಕ ಶಿಕ್ಷಣವನ್ನು ಪಡೆದುಕೊಳ್ಳುವ ಸೌಲಭ್ಯ ಅಲ್ಲಿತ್ತು. ●

# ಶ್ರದ್ಧಾಂಜಲಿ




ಅದು ಕಳೆದ ಜೂನ್ ಮಾಹೆಯ 15 ಹಾಗೂ 16 ರ ಸೋಮವಾರ, ಮಂಗಳವಾರಗಳ ನಡುರಾತ್ರಿ, ನಮ್ಮ ನೆರೆ ಶತ್ರು ದೇಶದ ಚೀನೀ ಸೈನಿಕರು ನಮ್ಮದೇ ನೆಲವಾದ ಗಾಲ್ವಾನ್ ಕಣಿವೆಯಲ್ಲಿ (Line of Actual controle) ನಮ್ಮಿಬ್ಬರ ಗಡಿರೇಖೆಯಲ್ಲಿ ತಮ್ಮ ಸೈನಿಕರನ್ನು ಜಮಾಯಿಸಿದ್ದರು. ಪೂರ್ವಒಪ್ಪಂದದಂತೆ ಯಾರೂ ಗುಂಡು ಹಾರಿಸುವಂತಿಲ್ಲ. ಇದನ್ನು ಅಕ್ಷರಶಃ ಪಾಲಿಸಿದ ನಮ್ಮ ವೀರ ಭಾರತೀಯ ಸೈನಿಕರು, ಆಕ್ರಮಿಸಿದ ನಮ್ಮ ಜಾಗವನ್ನು ತೆರವುಗೊಳಿಸಲು ಹೇಳ ಹೊರಟಾಗ ಮೊದಲೇ ಯೋಜನೆ ಮಾಡಿಕೊಂಡಿದ್ದಂತೆ ನಮ್ಮವರ ಮೇಲೆ ಆಕ್ರಮಣ ಮಾಡಿದರು. ಮೈಮರಗಟ್ಟಿಸುವ ನೀರಿದ್ದ ನದಿಗೆ ತಳ್ಳಿದರು. ಇಷ್ಟಾದರೂ ನಮ್ಮ ವೀರ ಸೈನಿಕರು ಕಬ್ಬಿಣದ ತಂತಿ ಸುತ್ತಿದ್ದ ಬಡಿಗೆ, ಕಬ್ಬಿಣದ ಸರಳುಗಳಿಂದ ಬಡಿಯುತ್ತಿದ್ದ ದುಷ್ಟ ಚೀನಿ ಸೈನಿಕರನ್ನು ಮುಷ್ಠಿ ಯುದ್ಧದಲ್ಲಿ ಥಳಿಸಿ 50 ಕ್ಕೂ ಹೆಚ್ಚು ಸೈನಿಕರನ್ನು ಯಮಸದನಕ್ಕಟ್ಟಿದರು.

ಈ ಕಾಳಗದಲ್ಲಿ 20 ಜನ ಭಾರತೀಯ ಸೈನಿಕರು ವೀರ ಮರಣ ಹೊಂದಿ ಸ್ವರ್ಗ ಸೇರಿದರು. ನಾಡಿನ ರಕ್ಷಣೆಗಾಗಿ ಅತಿ ಕಠಿಣ ಪರಿಸ್ಥಿತಿಯಲ್ಲೂ ಹೋರಾಡಿ ಹುತಾತ್ಮರಾದ ಆ ಎಲ್ಲ ಭಾರತೀಯ ಸೈನಿಕರಿಗೆ ಸಮಸ್ತ ಶಿಕ್ಷಕರ ಪರವಾಗಿ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಹೃತ್ಪೂರ್ವಕ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ. ಅವರ ಕುಟುಂಬ ವರ್ಗಕ್ಕೆ ದುಃಖವನ್ನು ತಡೆದುಕೊಳ್ಳುವ ಶಕ್ತಿ ನೀಡೆಂದು ಪರಮಾತ್ಮನಲ್ಲಿ ಪ್ರಾರ್ಥಿಸೋಣ. ಅವರ ಬಲಿದಾನ ವ್ಯರ್ಥವಾಗಲು ಬಿಡೆವೆಂಬ ಸಂಕಲ್ಪ ಮಾಡಿ, ಚೀನಿ ವಸ್ತುಗಳನ್ನು ಬಹಿಷ್ಕರಿಸೋಣ. ಆ ಮೂಲಕ ಚೀನೀ ದೈತ್ಯನನ್ನು ಆರ್ಥಿಕವಾಗಿ ದುರ್ಬಲಗೊಳಿಸೋಣ. ಇದು ನಾವು ಆ ಸೈನಿಕರಿಗೆ ಸಲ್ಲಿಸುವ ನೈಜ ಶ್ರದ್ಧಾಂಜಲಿ. ●

# ಶಾಲಾ ಪ್ರವಾಸ ಏಕೆ? ಹೇಗೆ?

**ಆರ್. ಸೀತಾಲಕ್ಷ್ಮಿ**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**



ಶಾಲೆಯಲ್ಲಿ ಗಣಿತಶಾಸ್ತ್ರದ ಅಧ್ಯಾಪಕಿ ಕ್ಷೇತ್ರ ಗಣಿತದ ಪಾಠ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳು ಏಕಾಗ್ರತೆಯಿಂದ ಆಲಿಸುತ್ತಿದ್ದಾರೆ. ಒಬ್ಬ ವಿದ್ಯಾರ್ಥಿ ಎದ್ದು ನಿಂತು "ನಿಜ ಜೀವನದಲ್ಲಿ ಇದರ ಉಪಯೋಗವೇನು ಮೇಡಂ" ಎಂದು ಪ್ರಶ್ನೆ ಕೇಳುತ್ತಾನೆ. ಪಾಠ ಮುಗಿದ ನಂತರ ಉತ್ತರಿಸುತ್ತೇನೆಂದು ತಿಳಿಸುತ್ತಾರೆ.

ಮತ್ತೊಂದು ತರಗತಿಯಲ್ಲಿ ವಿಜ್ಞಾನದ ಅಧ್ಯಾಪಕರು ಶಕ್ತಿಯನ್ನು ಒಂದು ರೂಪದಿಂದ ಮತ್ತೊಂದು ರೂಪಕ್ಕೆ ಬದಲಾಯಿಸಬಹುದೆಂದು ಹೇಳುತ್ತಿರುವಾಗ ಒಬ್ಬ ವಿದ್ಯಾರ್ಥಿಯ ಪ್ರಶ್ನೆಗೆ ಅಧ್ಯಾಪಕರು ಹರಿಯುತ್ತಿರುವ ನೀರಿನ ಚಲನಶಕ್ತಿಯಿಂದ ವಿದ್ಯುಚ್ಛಕ್ತಿಯನ್ನು ಪಡೆಯಬಹುದೆಂದು ತಿಳಿಸುತ್ತಾರೆ. ಪುನಃ ಅದೇ ವಿದ್ಯಾರ್ಥಿನಿ "ಇದು ನಮ್ಮ ಅನುಭವಕ್ಕೆ ಹೇಗೆ ಬರಬಹುದು ಮೇಡಂ" ಎನ್ನುತ್ತಾಳೆ. ಈಗಲೂ ಆ ಅಧ್ಯಾಪಕರು ಆಮೇಲೆ ಉತ್ತರಿಸುತ್ತೇನೆ ಎನ್ನುವರು. ಈ ಮೇಲಿನ ಎರಡೂ ಸಂದರ್ಭಕ್ಕೆ ಉತ್ತರ ಸಿಗುವುದೇ ಪ್ರವಾಸದಲ್ಲಿ.

ಬರೀ ಶಾಲೆಯ ಪಾಠಪ್ರವಚನಗಳಿಂದ ಮಾತ್ರ ವಿದ್ಯಾರ್ಥಿಗೆ ವಿಷಯಗಳು ಪೂರ್ಣ ಮನದಟ್ಟು ಆಗುವುದಿಲ್ಲ. ಶಾಲೆಯ ಹೊರವಾತಾವರಣದಿಂದಲೂ ವಿದ್ಯಾರ್ಥಿಗಳ ಕಲಿಕೆ ಆಗಲಿದೆ.

"ದೇಶ ಸುತ್ತು ಕೋಶ ಓದು" ಎನ್ನುವ ಗಾದೆ ಹುಟ್ಟಿರುವುದೇ ಈ ಉದ್ದೇಶದಿಂದ.

ಪ್ರವಾಸದಿಂದ ಪರಿವೀಕ್ಷಣೆಯುಂಟಾಗಿ, ಬೇರೆ ಬೇರೆ ಹೊರ ಚಟುವಟಿಕೆಗಳಿಂದಾಗಿ ಅನೇಕ ರೀತಿಯ ಅನುಭವಗಳುಂಟಾಗುತ್ತದೆ.

"ಪ್ರವಾಸದ ಅನುಭವವೇ ಒಂದು ಶಿಕ್ಷಣ"ವೆಂದರೆ ತಪ್ಪಾಗಲಾರದು.

ಖ್ಯಾತಗಣಿತಜ್ಞೆ ಶಕುಂತಲಾದೇವಿ "Education is not just about going to school and getting a degree. It's about widening your Knowledge and absorbing the truth about life" ಎಂದು ಹೇಳಿದ್ದಾರೆ. ಪ್ರಾರಂಭದಲ್ಲಿನ ವಿದ್ಯಾರ್ಥಿಗಳ ಪ್ರಶ್ನೆಗೆ ಗಣಿತ ಹಾಗೂ ವಿಜ್ಞಾನ ಅಧ್ಯಾಪಕರುಗಳು ಉತ್ತರವನ್ನು ಪ್ರವಾಸದ ಮೂಲಕ ಸ್ಪಷ್ಟೀಕರಿಸಬಹುದು.

ಉದಾಹರಣೆಗೆ ಕ್ಷೇತ್ರಗಣಿತದಲ್ಲಿ ಜಮೀನಿನ ಸ್ಥಳಕ್ಕೆ ವಿದ್ಯಾರ್ಥಿಗಳನ್ನು ಕರೆದೊಯ್ದು ವಿಸ್ತೀರ್ಣವನ್ನು ಕಂಡುಹಿಡಿಯುವ ವಿಧಾನವನ್ನು ತಿಳಿಸಬಹುದು.

ವಿಜ್ಞಾನದ ಅಧ್ಯಾಪಕರು ಕರ್ನಾಟಕದ ಜೋಗ್ ಅಥವಾ ಶಿಂಷಾಗಳಲ್ಲಿನ ಪವರ್ ಸ್ಟೇಷನ್‌ನ ಸ್ಥಳಗಳಿಗೆ ಕರೆದೊಯ್ದು ವಿದ್ಯುತ್ ತಯಾರಿಕೆಯನ್ನು ತಿಳಿಸಬಹುದು.(ಚಲನ ಶಕ್ತಿ ವಿದ್ಯುತ್ ಶಕ್ತಿಯಾಗಿ ಮಾರ್ಪಡುವಿಕೆಯನ್ನು ಕುರಿತು ತಿಳಿಸಿಕೊಡಬಹುದು)

ಶಾಲಾ ತರಗತಿಯ ಶಿಕ್ಷಣ ಹಾಗೂ ಲೋಕ ಶಿಕ್ಷಣ ಪರಸ್ಪರ ಪೂರಕ ಅಂಶಗಳು. ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎನ್ನುವುದು ಅರಿವಾಗುತ್ತದೆ. ಕಲಾಶಿಕ್ಷಕರು ಕಲೆಯ ಬಗ್ಗೆ ಪೂರ್ಣ ಪರಿಚಯಿಸಲು ಹಂಪೆ, ಹಳೇಬೀಡು, ಬೇಲೂರು, ಮೈಸೂರಿನ ಜನಗ್‌ಮೋಹನ್ ಆರ್ಟ್‌ಗ್ಯಾಲರಿ ಮೊದಲಾದ ಸ್ಥಳಗಳಿಗೆ ಕರೆದೊಯ್ಯಬಹುದು.

ಶಾಲಾಮಕ್ಕಳಿಗೆ ಪ್ರವಾಸ ಬಹುಮುಖ್ಯ ಮತ್ತು ಪ್ರವಾಸದ ಮೂಲಕ ವಿವಿಧ ರೀತಿಯ ಅನುಭವಗಳಾಗುತ್ತವೆ. ಅದು ಮನರಂಜನೆಯೂ ಹೌದು ಮತ್ತು ಹೊಸ ಹೊಸ ಜಾಗಗಳ ಪರಿಚಯವೂ ಆಗುವುದು. ಸಂಶೋಧನಾ ಪ್ರವೃತ್ತಿಯು ವಿದ್ಯಾರ್ಥಿಗಳಿಗೆ ಪ್ರವಾಸವೇ ಅವರ ಸಂಶೋಧನೆಯ ಅಡಿಗಲ್ಲಾಗಬಹುದು.

ಒಂದು ಕಟ್ಟಡ ಕಟ್ಟಲು ಮೇಸ್ತ್ರಿ, ಕೂಲಿಕಾರರು, ಕಟ್ಟಡಕ್ಕೆ ಬೇಕಾಗುವ ಪರಿಕರಗಳು ಎಲ್ಲವೂ ಮುಖ್ಯ. ಆದರೆ ಕಟ್ಟಡ ಹೇಗಿರಬೇಕು, ವಿನ್ಯಾಸ, ಅನುಕೂಲತೆ, ಮಾದರಿ ಕಟ್ಟಡ ಎನ್ನಿಸಿಕೊಳ್ಳುವ ಕೆಲಸ ಒಬ್ಬ ಒಳ್ಳೆಯ ಯೋಜಿತ ಇಂಜನಿಯರ್‌ನಿಂದ ಮಾತ್ರ ಸಾಧ್ಯ. "ಯೋಜಕ ತತ್ರ ದುರ್ಲಭಃ" ಎಂದು ಹೇಳುವುದು ಇದಕ್ಕಾಗಿಯೇ. ಆದ್ದರಿಂದ

### ಈಗ ಪ್ರವಾಸ ಹೇಗಿರಬೇಕು? ತಯಾರಿ ಹೇಗಿರಬೇಕು? ಎಂಬುದನ್ನು ನೋಡೋಣ

ಪ್ರವಾಸದ ಯೋಜನೆ ಬಹಳ ಮುಖ್ಯವಾದ ಸಂಗತಿ. ಪ್ರವಾಸದ ಯಶಸ್ಸು ಒಳ್ಳೆಯ ಯೋಜನೆಯಿಂದ ಮಾತ್ರ ಸಾಧ್ಯ.

1. ಮೊಟ್ಟ ಮೊದಲನೆಯದಾಗಿ ಸ್ಥಳ ಹಾಗೂ ದಿನಾಂಕ ನಿಶ್ಚಯವಾಗಬೇಕು.
2. ಪಾಠದ ವಿಷಯಕ್ಕೆ ಪೂರಕವಾದ ಸ್ಥಳ, ಐತಿಹಾಸಿಕ, ಧಾರ್ಮಿಕ ಅಥವಾ ಮನೋರಂಜನೆಗೂ, ವಿಜ್ಞಾನಕ್ಕೂ ಸಂಬಂಧಿಸಿದಂತೆ ಇದೆಯೇ ಎಂಬುದನ್ನು ನಿಶ್ಚಯಿಸಬೇಕು.
3. ಅಕ್ಟೋಬರ್‌ನಿಂದ ಡಿಸೆಂಬರ್ ನಡುವಿನ ಅವಧಿ ಪ್ರವಾಸಕ್ಕೆ ಸೂಕ್ತ ಸಮಯ.
4. ವಿದ್ಯಾರ್ಥಿಗಳ ತರಗತಿಯ ಸ್ತರ, ತಿಳಿಯಬೇಕಾದ ವಿಷಯ, ಇವುಗಳಿಗೆ ಆಧಾರಿತವಾಗಿ ಪ್ರವಾಸವನ್ನು ಏರ್ಪಡಿಸಬೇಕು.
5. ವಿದ್ಯಾರ್ಥಿಗಳು ತಿಳಿಯಬೇಕಾದ ವಿಷಯ, ಪ್ರವಾಸ ಮಾಡುವ ಸಮಯ ದೂರ ಹಾಗೂ ಮಳೆಗಾಲವಲ್ಲದ ಸಮಯ, ಪರೀಕ್ಷೆಯಲ್ಲದ ರಜಾ ಸಮಯ ಇವೆಲ್ಲವುಗಳನ್ನು ಗಮನಿಸಿ ದಿನಾಂಕವನ್ನು ನಿಗದಿಪಡಿಸಿಕೊಳ್ಳಬೇಕು.

ಪ್ರವಾಸ ಎರಡು ರೀತಿಯಲ್ಲಿತ್ತದೆ. • ಒಂದೇ ಊರಿನ ವಸ್ತು ಪ್ರದರ್ಶನ, ಧಾರ್ಮಿಕ ಸ್ಥಳ, ಮ್ಯೂಸಿಯಂ ವೀಕ್ಷಣೆಯಾದರೆ ಒಂದು ದಿನದ ಪ್ರವಾಸ ಸಾಕು. • ವೀಕ್ಷಿಸುವ ಸ್ಥಳ ದೂರದೂರದ ಊರುಗಳಲ್ಲಿದ್ದು ಮಾರ್ಗಮಧ್ಯದಲ್ಲಿ ನೋಡಲೇಬೇಕಾದ ಸ್ಥಳಗಳಿದ್ದರೆ ಪ್ರವಾಸದ ದಿನಗಳ ಅವಧಿಯನ್ನು ಹೆಚ್ಚಿಸಿ ಕೊಳ್ಳಬಹುದು.

ಪುಟ 8 ಕ್ಕೆ ➤

➢ ಪುಟ 7 ರಿಂದ.....

### ಪ್ರವಾಸದ ವ್ಯವಸ್ಥಾಪಕರು ತೆಗೆದುಕೊಳ್ಳಬೇಕಾದ ಎಚ್ಚರಿಕೆ

- ಪೋಷಕರ ಸಮ್ಮತಿ, ಪ್ರವಾಸದ ಆಯ–ವ್ಯಯದ ಅಂದಾಜುಪಟ್ಟಿ, ಸರ್ಕಾರದ ಮತ್ತು ಶಾಲಾ ವ್ಯವಸ್ಥಾಪಕ ಮಂಡಳಿ ಒಪ್ಪಿಗೆ ಹಾಗೂ ಮುಖ್ಯೋಪಾಧ್ಯಾಯರ ಒಪ್ಪಿಗೆಯನ್ನು ಪಡೆಯಬೇಕು.
- ವೀಕ್ಷಿಸುವ ಸ್ಥಳದ ಹವಾಮಾನ ಮೊದಲೇ ತಿಳಿದಿರಬೇಕು.
- ವಿದ್ಯಾರ್ಥಿಗಳು ತಂಗಲು ವ್ಯವಸ್ಥೆಯ ಬಗ್ಗೆ ಯೋಜಿಸಬೇಕು.
- ವಿದ್ಯಾರ್ಥಿ, ವಿದ್ಯಾರ್ಥಿನಿಯರು ಒಟ್ಟಿಗೆ ಪ್ರವಾಸದಲ್ಲಿದ್ದರೆ ವಿಶೇಷ ಸಲಹೆ, ಸೂಚನೆಗಳನ್ನು ಕೊಡಬೇಕು. ತಂಗಲು ಪ್ರತ್ಯೇಕ ವ್ಯವಸ್ಥೆ ಮಾಡಬೇಕು. ವಿದ್ಯಾರ್ಥಿನಿಯರ ಮೇಲುಸ್ತುವಾರಿಗಾಗಿ ಶಿಕ್ಷಕಿಯರು ಇರಲೇಬೇಕು.
- ವಿದ್ಯಾರ್ಥಿಗಳಿಗೆ ಸೂಚನೆಯಲ್ಲಿ ಪೆನ್ನು, ಪುಸ್ತಕ ತರಲು ಹೇಳಲೇಬೇಕು?
- ತರಬೇಕಾದ ವಸ್ತುಗಳ ವಿವರ ವಿದ್ಯಾರ್ಥಿಗಳಿಗೆ ತಿಳಿಸಿರಬೇಕು
- ಪ್ರವಾಸ ಮಾಡುವ ಸ್ಥಳದ ವಿವರಗಳನ್ನು ತಿಳಿಸಬೇಕು. ಉದಾ– ಚಿತ್ರದುರ್ಗ ಪ್ರವಾಸದ ಸ್ಥಳವಾದರೆ ಕೋಟೆಯ ವಿವರ, ಸಂಬಂಧಿಸಿದ ಓಬವ್ವನ ಕಥೆ, ರಾಜನ ವಿವರ ಇತ್ಯಾದಿ. ಉದಾ – ಜೋಗ್‌ಫಾಲ್ಸ್‌ಗೆ ಹೋಗುವುದಾದರೆ– ವಿಶ್ವೇಶ್ವರಯ್ಯನವರ ಉದ್ಗಾರ what a waste of energy? ಅಲ್ಲಿಂದ power house ಹೇಗೆ ನಿರ್ಮಾಣ ಇತ್ಯಾದಿ ವಿವರ. ಉದಾ – ಬೇಲೂರು, ಹಳೇಬೀಡಿಗೆ ಹೋದರೆ ಅದನ್ನು ಕಟ್ಟಿಸಿದ ಕಾಲ, ಕಟ್ಟಿಸಿದ ದೊರೆ, ಕಟ್ಟಿದ ಶಿಲ್ಪಿ ಇತ್ಯಾದಿ ವಿವರ.

### ಪ್ರಯಾಣಿಸುವಾಗ ವ್ಯವಸ್ಥಾಪಕರು ತೆಗೆದುಕೊಳ್ಳಬೇಕಾದ ಎಚ್ಚರಿಕೆ

- ಪ್ರಯಾಣದಲ್ಲಿ ಆರೋಗ್ಯ ಕೆಡದಿರುವಂತಹ ಆಹಾರ ತೆಗೆದುಕೊಂಡು ಹೋಗಬೇಕು.
- ವಿದ್ಯಾರ್ಥಿಗಳನ್ನು ಗುಂಪುಗಳನ್ನಾಗಿ ಮಾಡಿ ಆಯಾಯ ಗುಂಪಿನ ನಾಯಕರುಗಳಿಗೆ ವಿಶೇಷ ಸೂಚನೆಗಳನ್ನು ಕೊಡಬೇಕು.
- ವೈದ್ಯಕೀಯ ತುರ್ತು ಔಷಧಿಗಳನ್ನು ತೆಗೆದುಕೊಂಡು ಹೋಗಬೇಕು. (ಉದಾ– ಬಾಂಡೇಡ್, ಜ್ವರ,ಕೆಮ್ಮು ತಲೆನೋವಿನ ಮಾತ್ರೆಗಳು)
- ವಿದ್ಯಾರ್ಥಿಗಳನ್ನು ಸಮುದ್ರ, ನದಿ ಇಂತಹ ಸ್ಥಳಗಳಿಗೆ ಕರೆದುಕೊಂಡು ಹೋಗುವಾಗ ವಿಶೇಷ ಗಮನ ಹರಿಸಬೇಕು. ಇಲ್ಲದಿದ್ದರೆ ದೂರದಿಂದ ವೀಕ್ಷಿಸಿ ವಾಪಸ್ಸು ಕರೆತರಬೇಕು.

ಒಟ್ಟಿನಲ್ಲಿ ಪ್ರವಾಸವು ವಿದ್ಯಾರ್ಥಿಗಳ ಮನೋವಿಕಾಸಕ್ಕೆ ನಾಂದಿಯಾದರೆ ಬಹುಸೂಕ್ತ.

ಪ್ರವಾಸದಿಂದ ದೊರಕುವ ಲೋಕ ಶಿಕ್ಷಣ ವಿದ್ಯಾರ್ಥಿಗಳ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ ಹಾಗೂ ಅವರ ಶಿಕ್ಷಣದ ಆಳ, ಅರಿವು ವಿಸ್ತಾರವಾಗುತ್ತದೆ.

ವಿದ್ಯಾರ್ಥಿಗಳಲ್ಲಿ ಸಹಭಾಗಿತ್ವ ಬೆಳೆಸುವಿಕೆ, ಮೇಲು, ಕೀಳೆಂಬ ಭಾವನೆ ಹೋಗಲಾಡಿಸುವಿಕೆ. ತರಗತಿಯಲ್ಲಿ ತೋರಿಸಲು ಸಾಧ್ಯವಾಗದ ಕೆಲವು ಸ್ವಯಂ ಪ್ರತಿಭೆಯನ್ನು ಹೊರಸೂಸುವಲ್ಲಿ, ಎಲ್ಲರ ಮನೆಯ ಹೊಸ ಹೊಸ ತಿಂಡಿ ತಿನಿಸುಗಳನ್ನು ಸವಿಯುವ ಅಪರೂಪದ ಅವಕಾಶ ಪ್ರವಾಸದಲ್ಲಿದೆ.

ನಮ್ಮ ದೇಶದ ಸಂಸ್ಕೃತಿಯ ಬಗ್ಗೆ ಅರಿವು ಮೂಡಿ ವಿದ್ಯಾರ್ಥಿಗಳಲ್ಲಿ ಹೊಸ ಸ್ಫೂರ್ತಿ ಪ್ರೇರಿತವಾಗಿ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಲೋಕಶಿಕ್ಷಣ ಅಡಿಗಲ್ಲಾಗಿ ನಿಂತರೆ ಪ್ರವಾಸ ಏರ್ಪಡಿಸಿದವರ ಶ್ರಮ ಸಾರ್ಥಕವಾಗುತ್ತದೆ. ಪ್ರವಾಸದ ವ್ಯವಸ್ಥಾಪಕರು ಪ್ರವಾಸ ನಡೆಸುವಾಗ ಒಂದು ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಪ್ರವಾಸ ಬರೀ ಮಾನಸಿಕ ರಂಜನೆಗಾಗಿ ಎನ್ನುವ ಮನೋಭಾವ ಬರದಂತೆ ಪ್ರವಾಸದ ಗಂಭೀರತೆಯನ್ನು ಕಾಪಾಡಿಕೊಂಡು ಪ್ರವಾಸ ನಡೆಸಿದರೆ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಆಗುವ ಉಡಾಫೆತನವನ್ನು ತಪ್ಪಿಸಿ ಜವಾಬ್ದಾರಿಯುತವಾದ ಪ್ರಜೆಯನ್ನಾಗಿ ಮಾಡಬಹುದು.

ಕೊನೆಯದಾಗಿ ಪ್ರವಾಸ ಮುಗಿಸಿ ಬಂದ ನಂತರ ತರಗತಿಯಲ್ಲಿ ಅನುಭವ ಕಥನವನ್ನು ಮಾಡಿದರೆ ಪ್ರವಾಸಕ್ಕೆ ಬರದಿರುವ ವಿದ್ಯಾರ್ಥಿಗಳಿಗೂ ಲಾಭವಾಗುವುದು. ಪ್ರವಾಸಕ್ಕೆ ಬಂದ ವಿದ್ಯಾರ್ಥಿಗಳಿಗೆ ತಾವು ವೀಕ್ಷಿಸಿದ ಸ್ಥಳಗಳನ್ನು ಕುರಿತು ಪ್ರಬಂಧ ಬರೆದು ತರುವಂತೆ ಹೇಳಿದಾಗ ಅವರಲ್ಲಿ ಬರವಣಿಗೆಯ ಕಲೆ ಅರಳುತ್ತದೆ. ಪ್ರವಾಸದ ನೆನಪು ಶಾಶ್ವತವಾಗುತ್ತದೆ.

ಈ ಸಂದರ್ಭದಲ್ಲಿ ಕರೋನಾ ಮಹಾಮಾರಿ ಬಂದ ಈ ವರ್ಷ ಪ್ರವಾಸ ಅಸಂಭವ. ಮುಂದಿನ ವರ್ಷದಿಂದ ಶಾಲಾ ಪ್ರವಾಸವನ್ನು ನಡೆಸಬಹುದು. ಎಲ್ಲಿಗೆ ಹೋಗೋಣ ಪ್ರವಾಸ ನೀವೇ ತಿಳಿಸಿ.

●



**ನರಜನ್ಮವ ತೊಡೆದೆ ಹರಜನ್ಮವ ಮಾಡಿದ ಗುರುವೆ ನಮೋ**
**ಭವಬಂಧವ ಬಿಡಿಸಿ ಪರಮಸುಖವ ತೋರಿದ ಗುರುವೆ ನಮೋ**
**ಭವಿಯೆಂಬುದ ತಡೆದು ಭಕ್ತಿಯೆಂದಿನಿಸಿದ ಗುರುವೆ ನಮೋ**
**ಚೆನ್ನಮಲ್ಲಿಕಾರ್ಜುನನ ತಂದೆನ್ನ ಕೈವಶಕ್ಕೆ ಕೊಟ್ಟ ಗುರುವೆ ನಮೋ ನಮೋ ।**

**ಎತ್ತಾಗಿ ತೊತ್ತಾಗಿ, ಹಿತ್ತಲದ ಗಿಡವಾಗಿ,**
**ಮತ್ತೆ ಪಾದದ ಕೆರವಾಗಿ ಗುರುವಿನ**
**ಹತ್ತಲಿರು ಎಂದ ಸರ್ವಜ್ಞ॥**

# ಆತ್ಮನಿರ್ಭರತೆ & ಶಿಕ್ಷಕ



**ಡಾ॥ ಟಿ. ಎನ್. ಲೋಕೇಶ್**
**ಪ್ರಾಧ್ಯಾಪಕರು ಮತ್ತು ಚಿಂತಕರು**
**ಎನ್.ಎಂ.ಕೆ.ಆರ್.ವಿ ಮಹಿಳಾ ಕಾಲೇಜು**
**ಜಯನಗರ, ಬೆಂಗಳೂರು–11**

## ಆತ್ಮದೀಪೋ ಭವ – ಗೌತಮ ಬುದ್ಧ

ಭಾರತದ ಸನಾತನ ಪರಂಪರೆಯಲ್ಲಿನ ಬಹುದೊಡ್ಡ ನಂಬಿಕೆಯೆಂದರೆ ವ್ಯಕ್ತಿ ತನ್ನ ಆತ್ಮವನ್ನು ಉದ್ಧರಿಸಿಕೊಳ್ಳಬೇಕು. ತಾನು ಕಂಡುಕೊಂಡ ಅಂತರಾತ್ಮದ ಬೆಳಕಿನಿಂದ ಜಗತ್ತನ್ನು ಉದ್ಧರಿಸಲು ಶ್ರಮಿಸಬೇಕು. ಆತ್ಮ ವ್ಯಕ್ತಿಯ ಭೌತಿಕ ದೇಹದಿಂದ ಬಂಧಿಸಲ್ಪಟ್ಟಿದ್ದರೂ ಸಹ ವಿಶ್ವದ ಅನುಸಂಧಾನದೊಂದಿಗೆ ಆತ್ಮವನ್ನು ಜಾಗೃತಗೊಳಿಸಿ, ಉದ್ದೀಪನಗೊಳಿಸಿ ಅತ್ಯುನ್ನತ ಪಾರಮಾರ್ಥಿಕ ಸ್ತರಕ್ಕೆ ಆರೋಹಣ ಮಾಡುವುದೇ ಜೀವಿತದ ಅಂತಿಮ ಸತ್ಯವಾಗಬೇಕು. ಆ ಮೂಲಕ ಮಾನವತ್ವದಿಂದ ದೈವತ್ವಕ್ಕೆ ಏರುವುದೇ ಆತ್ಮಜಾಗೃತಿಯ ಪರಮೋಚ್ಛ ಅವಸ್ಥೆ. ಆಗ ಮಾತ್ರ ಮನುಷ್ಯ ಎಲ್ಲಾ ಬಂಧನಗಳಿಂದ ಆತ್ಮನಿರ್ಭರನಾಗಲು ಸಾಧ್ಯ ಎಂಬ ಅನುಭಾವಿಕ ನುಡಿಗಳಿವೆ. ನಿನ್ನ ಉದ್ಧಾರ ಹಾಗೂ ನಿನ್ನ ಪತನಕ್ಕೆ ನೀನೇ ಕಾರಣವಾಗಿದ್ದೀಯ ಎಂಬ ಭಗವಾನ್ ಶ್ರೀಕೃಷ್ಣನ ಭಗವದ್ಗೀತೆ ಉದ್ಘೋಷ ಇದನ್ನೇ ಪುಷ್ಠೀಕರಿಸುತ್ತದೆ.

ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸದ ವಿಕಾಸದ ಮಾರ್ಗ ತೋರುವವನು ಶಿಕ್ಷಕನಾಗಿದ್ದಾನೆ. ಶಿಕ್ಷಕ ತನ್ನ ಜ್ಞಾನ ಸಂಪತ್ತನ್ನು ವಿದ್ಯಾರ್ಥಿಗಳಿಗೆ ಧಾರೆ ಎರೆದು ಕೊಡುವುದರ ಮೂಲಕ ಅವರಲ್ಲಿ 'ಆತ್ಮನಿರ್ಭರತೆ' ತಂದು ಕೊಡಬೇಕು. 'ಆತ್ಮನಿರ್ಭರತೆಯ ಅನ್ವರ್ಥವೇ 'ಸ್ವಾವಲಂಬಿತನ' ಅಂದರೆ ಪ್ರತಿಯೊಬ್ಬ ವಿದ್ಯಾರ್ಥಿ ತನ್ನಲ್ಲಿ ತಾನೇ ವಿಶ್ವಾಸವಿರಿಸಿ ಯಾರಿಗೂ ಹೊರೆಯಾಗದಂತೆ ತನ್ನ ಜೀವನ ತಾನು ರೂಪಿಸಿಕೊಂಡು ಸ್ವಾವಲಂಬಿ ಬದುಕನ್ನು ಸಾಗಿಸಿದರೆ ಅದು ಆತ್ಮನಿರ್ಭರತೆಯ ಪ್ರತೀಕವಾಗುತ್ತದೆ. ಒಂದರ್ಥದಲ್ಲಿ 'ಪರಾವಲಂಬಿ' ಮನಸ್ಥಿತಿಯನ್ನು ಕಿತ್ತೊಗೆದು ಸ್ವಾವಲಂಬಿಯಾಗಿ ಘನತೆ, ಚಾರಿತ್ರ್ಯ ಮತ್ತು ಗೌರವದಿಂದ ಜೀವನವನ್ನು ಸಂಪನ್ನಗೊಳಿಸುವುದೇ ಆತ್ಮನಿರ್ಭರತೆಗೆ. ಹೆಮ್ಮೆಯ ಭಾರತೀಯರಾದ ನಾವು ಕೋವಿಡ–19ರ ಪ್ರಕ್ಷುಬ್ಧ ಪರಿಸ್ಥಿತಿಯನ್ನು ಧನಾತ್ಮಕ ಮನಸ್ಥಿತಿಯಿಂದ ಅತ್ಯುತ್ತಮ ಆತ್ಮವಿಕಾಸದ ಅವಕಾಶವನ್ನಾಗಿ ಮಾಡಿಕೊಂಡದ್ದು ನಮ್ಮೆಲ್ಲರ ಆತ್ಮನಿರ್ಭರತೆ ಹಿಡಿದ ಸಾಕ್ಷಿಯಾಗಿದೆ.

ಆತ್ಮನಿರ್ಭರ ಭಾರತವೆಂದರೆ 'ಸ್ವಾವಲಂಬಿ ಭಾರತ'. ರಾಷ್ಟ್ರ ಪರಾವಲಂಬಿಯಾಗದೆ ತನ್ನನ್ನು ತಾನು ಪೋಷಿಸಿ, ರಕ್ಷಿಸಿಕೊಳ್ಳುವ ಸಮರ್ಥ ತಾಕತ್ತಿನ ಶಕ್ತಿ ಹೊಂದುತ್ತದೆಯೋ ಆಗ ಅದನ್ನು 'ಆತ್ಮನಿರ್ಭರ ರಾಷ್ಟ್ರ' ಎಂದು ತಿಳಿಯಲಾಗುತ್ತದೆ. ಪ್ರಸಕ್ತ ಸನ್ನಿವೇಶದಲ್ಲಿ ಸದೃಢ ಶಿಕ್ಷಣ ವ್ಯವಸ್ಥೆಯ ದೃಷ್ಟಿಯಿಂದ ರಾಷ್ಟ್ರ ನಿರ್ಮಾಪಕರಾದ ಶಿಕ್ಷಕರ ಸಮರ್ಪಣಾಭಾವದ ಪೂರ್ಣ ಆತ್ಮಸಮರ್ಪಣೆಯ ಅವಶ್ಯಕತೆ ಹೆಚ್ಚಾಗಿದೆ. ಅಸಾಧ್ಯವಾದುದನ್ನು ಸಾಧ್ಯವಾಗಿಸುವ ಅದಮ್ಯ ಇಚ್ಛಾಶಕ್ತಿಯ ಏಕಮೇವಾ ಸಂಗಮ ಸಾಕಾರ ಶಕ್ತಿಯಾಗಿ ಶಿಕ್ಷಕನಿದ್ದಾನೆ. ಶಿಕ್ಷಕ ತನ್ನ ಘನ ಕಾಯಕದ ಮೂಲಕ ಜನಸೇವೆ– ಈಶಸೇವೆ, ವಿದ್ಯಾರ್ಥಿ ಸೇವೆ– ರಾಷ್ಟ್ರಸೇವೆ ಎಂಬ ಕೈಂಕರ್ಯದ ಭಾಗಿಧಾರನಾಗಿದ್ದಾನೆ. ಆತ್ಮನಿರ್ಭರ ಭಾರತದ ರಾಷ್ಟ್ರ ಶಿಲ್ಪಿಗಳಾದ ಶಿಕ್ಷಕ ಸಮೂಹ 21ನೇ ಶತಮಾನವನ್ನು 'ಭಾರತದ ಶತಮಾನವನ್ನಾಗಿ ಮಾಡುವ ತುರ್ತು ಅಗತ್ಯತೆ ಬಂದೊದಗಿದೆ. ಆತ್ಮನಿರ್ಭರತೆಯ ಆಯಾಮಗಳಾದ ಆರ್ಥಿಕತೆ, ಮೂಲಸೌಕರ್ಯ, ಜಾಗತಿಕ ಆತ್ಮ ಸಂತೋಷ–ಸಹಕಾರ–ಶಾಂತಿ, ಸ್ಥಾನಿಕ ಮಾರುಕಟ್ಟೆಗಳ ಸದೃಢತೆಯ ಜಾಗೃತ ಪ್ರಜ್ಞೆ ಸರ್ವರಲ್ಲೂ ಮೂಡಿಸಿ ಆತ್ಮನಿರ್ಭರ ಸಮಾಜವನ್ನು ಕಟ್ಟಬೇಕಾಗಿದೆ.

ವಿದ್ಯಾರ್ಥಿ ಶಕ್ತಿ–ರಾಷ್ಟ್ರಶಕ್ತಿ ಎಂಬ ನುಡಿಯಂತೆ ಸಮಸ್ತ ವಿದ್ಯಾರ್ಥಿ ಸಮುದಾಯದಲ್ಲಿ 'ಸ್ವಭಾಷಾ', 'ಸ್ವಭೂಷ', 'ಸ್ವದೇಶಿ' ಮತ್ತು 'ಸ್ವರಾಜ್ಯ'ಗಳ ಬಗ್ಗೆ ಹೆಮ್ಮೆ ಹಾಗೂ ಆತ್ಮವಿಶ್ವಾಸ ಮೂಡಿಸಿ ಕೆಚ್ಚೆದೆಯ ಸ್ವಾವಲಂಬಿತನವನ್ನು ಅವರ ವ್ಯಕ್ತಿತ್ವದಲ್ಲಿ ಅನುಕರಣ ಗೊಳಿಸುವ ಕಾರ್ಯ ಜರೂರಾಗಿ ಅನುಷ್ಠಾನಗೊಳ್ಳಬೇಕಾಗಿದೆ.

ಆರ್ಥಿಕ ಸ್ವಾವಲಂಬನೆ ದೃಷ್ಟಿಯಿಂದ ದೇಸಿಯ ಬೀದಿ ವ್ಯಾಪಾರಿಗಳನ್ನು ಗೌರವಿಸುವ, ಪ್ರೋತ್ಸಾಹಿಸುವ ಮತ್ತು ಪೋಷಿಸುವ ಔದಾರ್ಯ ಎಲ್ಲರಲ್ಲೂ ಬೆಳಸಬೇಕಾಗಿದೆ. ದೇಸಿಯ ಸ್ಥಾನಿಕ ಉತ್ಪನ್ನಗಳಿಗೆ ಸಮುದಾಯ ಧ್ವನಿಯಾಗುವಂತೆ ಪರಿವರ್ತಿಸಬೇಕಾಗಿದೆ. ಭವ್ಯ ಸಂಸ್ಕೃತಿ ಮತ್ತು ಪಾರಂಪರಿಕ ಸ್ವರೂಪಾಧಾರಿತ ರಾಷ್ಟ್ರ ಭಾರತವಾದ್ದರಿಂದ ಶಿಕ್ಷಣವನ್ನು ವಾಸ್ತವಾಗಿ ಸಂಸ್ಕಾರದ ಭಾಗವೆಂದು ಮನವರಿಕೆ ಮಾಡಿಕೊಡಬೇಕೇ ಹೊರತು ವ್ಯಾಪಾರವೆಂದಲ್ಲ. ಸಂಪನ್ನ ಸಮಾಜದ ಉತ್ಕೃಷ್ಟತೆಯ ಪರಾಕಷ್ಠೆಯೇ ಆತ್ಮನಿರ್ಭರತೆ ಎಂಬುದನ್ನು ಸಾಕ್ಷೀಕರಿಸಬೇಕಾಗಿದೆ. ಸಾಮಾಜಿಕ ಅಂತರ, ಯೊಗ, ವ್ಯಾಯಾಮ, ಅಧ್ಯಯನಶೀಲತೆ ಮತ್ತು ಧ್ಯಾನದ ಮೂಲಕ ಸದೃಢತೆ, ಸಮಚಿತ್ತತೆ ಸಾಧಿಸಿ ಆತ್ಮನಿರ್ಭರ ಭಾರತವನ್ನು ಸೃಜಿಸಬೇಕಾಗಿದೆ.

ಆತ್ಮನಿರ್ಭರತೆಯ ದೃಷ್ಟಿಯಿಂದ ಪ್ರಸ್ತುತ ಚಾಲ್ತಿಯಲ್ಲಿರುವ ಶಿಕ್ಷಣಕ್ರಮವನ್ನು ಭಾರತೀಯರ ಧ್ಯೇಯ ಉದ್ದೇಶ ಗಳಿಗನುಗುಣವಾಗಿ ಭಾರತೀಯಕರಣಗೊಳಿಸಿ ಸನಾತನ ಪರಂಪರೆಯ ದಿವ್ಯಾತ್ಮರಾದ ಆದಿಗುರು ಶಂಕರ, ಯಾಜ್ಞವಲ್ಕ್ಯ, ಪಾಣಿನಿ, ಚಾಣಕ್ಯ, ಸ್ವಾಮಿ ವಿವೇಕಾನಂದರ ಕನಸನ್ನು ನನಸು ಮಾಡುವ ಸೌಭಾಗ್ಯ ನಮ್ಮೆಲ್ಲರ ಪಾಲಿಗೆ ದೊರಕಿರುವುದು ಪುಣ್ಯವಿಶೇಷವೇ ಆಗಿದೆ.

'ಆತ್ಮನಿರ್ಭರ ಶಿಕ್ಷಣ'ದ ಮೂಲಕ ವಿದ್ಯಾರ್ಥಿ ಸಮೂಹದಲ್ಲಿ ವಿಚಾರಕ್ರಾಂತಿ ಮೂಡಿಸಿ, ಸ್ವದೇಶಿ, ಸದೃಢ, ಸ್ವತಂತ್ರ, ಭ್ರಷ್ಟಾಚಾರ ಮುಕ್ತ ಸ್ವಾವಲಂಬಿ – ಆತ್ಮನಿರ್ಭರ ಭಾರತವನ್ನು ನಿರ್ಮಿಸೋಣ.

●

# ನಾಗ ಪ್ರಪಂಚ

**ಶ್ರೀಮತಿ ಸುನೀತಾ ಗಂಗಾಧರ್**
ರಾಮನಗರ

ಶ್ರಾವಣ ಮಾಸದ ಶುಕ್ಲಪಕ್ಷದ ಪಂಚಮಿಯನ್ನು ಭಾರತೀಯ ಹಿಂದೂ ಪರಂಪರೆಯವರು "ನಾಗರ ಪಂಚಮಿ" ಎಂದುಅತ್ಯಂತ ಶ್ರದ್ಧಾ–ಭಕ್ತಿಯಿಂದ ಆಚರಿಸುವರು. ಇಡೀ ದೇಶವೇ ನಾಗ ಪೂಜೆಯನ್ನು ಮಾಡುತ್ತದೆ ಎಂದರೆ ಇದರ ಮಹತ್ವವೇನಿರಬಹುದು, ಇದರ ಹಿಂದಿನ ಇತಿಹಾಸವೇನಿರಬಹುದು? ಸರ್ಪಗಳ ಆರಾಧನೆ ಅದೆಷ್ಟು ಪುರಾತನವಾದದ್ದು? ಕೇವಲ ಭಾರತೀಯ ನಾಗರೀಕತೆಯಲ್ಲಿ ಮಾತ್ರವೇ ಇವುಗಳ ಉಲ್ಲೇಖಗಳಿವೆಯೋ ಅಥವಾ ಇತರೆ ರಾಷ್ಟ್ರಗಳ ಇತಿಹಾಸದಲ್ಲೂ ಇದೆಯೆ? ಇಂತಹ ಹಲವಾರು ಪ್ರಶ್ನೆಗಳಿಗೆ ಕಾಲಾನುಕಾಲದಲ್ಲಾದ ಸಂಶೋಧನೆಗಳಿಂದ ಉತ್ತರ ದೊರಕಿದೆ. ಹಾಗೆಯೆ ಕಾಲಚಕ್ರದಲ್ಲಿ ಕೆಲ ಅಜ್ಞಾನಿಗಳ, ಅಂಧ ಧರ್ಮಾಚರಣೆಯ ಜನರ ಕಾರಣ ಭಾರತೀಯ ಪರಂಪರೆ ಹಾಗೂ ಪದ್ಧತಿಗಳಲ್ಲಿ ಸೇರಿಕೊಂಡ ಅನಾಚಾರ, ಅಪಚಾರಗಳ ನಿರ್ಮೂಲನೆಗೆ ವಿಷಯ ಜ್ಞಾನದ ಅವಶ್ಯಕತೆ ಇದೆ. ಆ ಜ್ಞಾನ ವೇದಗಳೆಂದು ಕರೆಯಲ್ಪಡುವ 'ವೈದಿಕ ಸಾಹಿತ್ಯ"ದ ಅಧ್ಯಯನದ ಮೂಲಕ ಪಡೆಯುವ ಅವಕಾಶವುಂಟು. 108 ಉಪನಿಷತ್‌ಗಳು ಈ ವೇದದ ಒಂದು ಭಾಗವೇ ಆಗಿದ್ದು ನಮ್ಮ ಪರಂಪರಾಗತ ಜ್ಞಾನನಿಧಿಯ ಪರಿಚಯ ಮಾಡಿಕೊಡುತ್ತದೆ.



ನಾಗಗಳ ಪ್ರಸ್ತಾಪ ಭಾರತೀಯ ಪರಂಪರೆಯಲ್ಲಿ ಅತೀ ಪುರಾತನವಾದದ್ದಾಗಿದೆ. ಗಣೇಶನಿಗೆ ಹೊಟ್ಟೆಯ ಆಭರಣವಾಗಿ, ಪರಶಿವನ ಕೊರಳ ಮಾಲೆಯಾಗಿ, ಶ್ರೀಹರಿಯ ಶಯನ ತಲ್ಪವಾಗಿ, ಅಮೃತ ಮಂಥನದ ಕಡಗೋಲಾಗಿ, ಶಿವಪುತ್ರ ಸುಬ್ರಮಣ್ಯ ಅವತಾರವಾಗಿ ಹಲವು ದೇವಾನು ದೇವತೆಗಳ ಶಿರದ ಪ್ರಭಾವಳಿಯಾಗಿ, ಸಂಪತ್ತಿನ ರಕ್ಷಕನಾಗಿ ನಾರಾಯಣ ಅವತಾರದ ಭಾಗವಾಗಿ ಹತ್ತು ಹಲವು ಸ್ವರೂಪಗಳಲ್ಲಿ ನಾಗನನ್ನು ಕಾಣುವುದಿದೆ. ಇಂತಹ ಶಕ್ತಿಶಾಲಿ ಪ್ರಭಾವಿ ನಾಗಗಳ ಕುರಿತಾಗಿ ನಮ್ಮ ಪುರಾಣಗಳಲ್ಲಿ ಹಲವು ಕಥಾನಕಗಳುಂಟು. ಅದರಲ್ಲಿ ಕೆಲವು ಇಂತಿವೆ...

ಮಹರ್ಷಿ ಕಾಶ್ಯಪ ಎಂಬುವವರಿಗೆ ಅನೇಕ ಪತ್ನಿಯರಿದ್ದು ಅವರಲ್ಲಿ ಸಹೋದರಿಯಾದ ಕದ್ರು– ವಿನುತೆ ಎಂಬುವವರು ಒಬ್ಬರು. ಕದ್ರುವಿನ ಆಸೆಯಂತೆ ಮಹರ್ಷಿಕಶ್ಯಪರು ಅವಳಿಗೆ 1,000 ಬಲಶಾಲಿ ನಾಗ ಸಂತಾನದ ವರಪ್ರಸಾದ ನೀಡಿದರು. ಅವರಲ್ಲಿ ವಾಸುಕಿ (ನಾಗರ ರಾಜ), ಶೇಷನಾಗ, ತಕ್ಷಕ, ಮಾನಸ (ನಾಗರಾಣಿ) ವಲಂ, ಪ್ರಮುಖರು. ವಿನುತೆಯಲ್ಲಿ ಅರುಣ ಹಾಗೂ ಗರುಡರೆಂಬ ಇಬ್ಬರು ಬಲಶಾಲಿ ಪುತ್ರತ್ರಯರು ಜನಿಸಿದರು. ಅರುಣ ಸೂರ್ಯ ದೇವನ ಸಾರಥಿಯಾದರೆ, ಗರುಡ ಶ್ರೀ ಮಹಾವಿಷ್ಣುವಿನ ವಾಹನವಾದನು.

ತಂದೆ–ಮಕ್ಕಳಾದ ಕಾಶ್ಯಪ, ನಾಗ, ಗರುಡನ ಜನ್ಮ ತಿಥಿ ಒಂದೇ ಆಗಿರುವ ಕಾರಣ ಶ್ರಾವಣದ ಪಂಚಮಿ ತಿಥಿಯಂದೇ ಈ ಮೂವರ ಪೂಜೆಯನ್ನು ಮಾಡುವುದು ಶ್ರೇಷ್ಠವೆನ್ನುವರು. ಈ ದಿನವನ್ನು ಗರುಡ ಪಂಚಮಿ, ನಾಗಪಂಚಮಿ, ಎಂತಲೂ ಕರೆವರು.

ತ್ರೇತ್ರಾಯುಗದ ಶ್ರೀ ರಾಮಾಯಣದಲ್ಲಿ ಗರುಡ ಹಾಗೂ ನಾಗಗಳ ಪ್ರಸ್ತಾಪವಿದೆ. ರಾವಣ ಪುತ್ರ ಇಂದ್ರಜಿತುವು ರಣರಂಗದಲ್ಲಿ ಸರ್ಪಾಸ್ತ್ರವನ್ನು ಪ್ರಯೋಗಿಸಿ ಎದುರಾಳಿಯಾದ ಶ್ರೀರಾಮ ಹಾಗೂ ಲಕ್ಷ್ಮಣನನ್ನು ಕಟ್ಟಿ ಹಾಕುತ್ತಾನೆ. ಆ ನಾಗಾಸ್ತ್ರದ ವಿಷದ ಪ್ರಭಾವದಿಂದ ಮೂರ್ಛಿತರಾದ ಸಹೋದರದ್ವಯರನ್ನು ಸ್ವತಃ ಗರುಡನೇ ಬಂದು ಆ ಬಂಧನದಿಂದ ಬಿಡಿಸಿ ಪ್ರಾಣಾಪಾಯದಿಂದ ಹೊರತರುತ್ತಾನೆ. ಇಲ್ಲಿ ಲಕ್ಷ್ಮಣನು ಆದಿಶೇಷನೆ ಅವತಾರವೆ ಆಗಿರುತ್ತಾನೆ. ದ್ವಾಪರದಲ್ಲಿ ಬಲರಾಮನಾಗಿ ಹರಿಯ ಕೃಷ್ಣಾವತಾರಕ್ಕೆ ಜೊತೆಗೂಡುತ್ತಾನೆ.

ವೈಕುಂಠದಲ್ಲಿ ಶ್ರೀ ಮಹಾವಿಷ್ಣುವಿನ ಸೇವೆಯಲ್ಲಿ ಆದಿಶೇಷ ಹಾಗೂ ಗರುಡ ಇಬ್ಬರೂ ಒಂದೆಡೆಯೆ ಇರುವರು. ಸಾಮಾನ್ಯವಾಗಿ ನಾಗ ಹಾಗೂ ಗರುಡನನ್ನು ಬದ್ಧವೈರಿಗಳೆಂದೆ ಬಿಂಬಿಸಲಾಗಿದೆ. ಆದರೆ ಶ್ರೀ ಹರಿಯ ಸನ್ನಿಧಾನದಲ್ಲಿ ರಾಗ–ದ್ವೇಷಗಳಿಗೆ ಯಾವುದೇ ಸ್ಥಾನಗಳಿರುವುದಿಲ್ಲ ಎಂಬುದನ್ನು ಸಹೋದರ ಜೋಡಿಯು ತೋರಿಸುತ್ತದೆ. ಜೀವನದಲ್ಲಿ ಎದುರಾಗುವ ಹಲವು ವಿರೋಧಾಭಾಸಗಳ ನಡುವೆ ಧರ್ಮದ ಹಾದಿಯಲ್ಲಿ ಕರ್ತವ್ಯ ನಿರ್ವಹಣೆ ಧ್ಯೇಯವಾಗಿರಬೇಕೆನ್ನುವುದನ್ನು ಇದು ತಿಳಿಸುತ್ತದೆ.

ದ್ವಾಪರ ಯುಗದಲ್ಲಿ ಪರೀಕ್ಷಿತ ಮಹಾರಾಜನು ಸರ್ಪದ ಕಾರಣ ಮರಣ ಹೊಂದುವನು. ಇದನ್ನು ಅರಿತು ಆತನ ಮಗನಾದ ಜನಮೇಜಯನು ಸರ್ಪ ಸಂಕುಲವನ್ನೇ ವಿನಾಶಗೈವ ಪ್ರತಿಶೋಧದ ಭಾವದಿಂದ 'ಮಹಾಯಜ್ಞ'ವನ್ನು ಕೈಗೊಂಡಿರುತ್ತಾನೆ. ಆ ಯಜ್ಞದ ಫಲವಾಗಿ ಅರ್ಧ ನಾಗಸಂಕುಲವೇ ಯಜ್ಞದಗ್ನಿಗೆ ಆಹುತಿ ಯಾಗುತ್ತಿರುವಾಗ ಮಾನಸ (ನಾಗರಾಣಿ) ಹಾಗೂ ಜರಾತ್ಕಾರು (ಬ್ರಾಹ್ಮಣ) ಋಷಿ ದಂಪತಿಯ ಆಸ್ತಿಕನೆಂಬ ಮಗನ ಕಾರಣದಿಂದಾದ ಮನಃ ಪರಿವರ್ತನೆ ಹೊಂದಿ ಜನಮೇಜಯನು ಆ ಮಹಾಯಜ್ಞವನ್ನು ನಿಲ್ಲಿಸಿ ಉಳಿದ ನಾಗಗಳಿಗೆ ಜೀವದಾನ ನೀಡುವನು. ಅಪಮಾನಿತ ತಕ್ಷಕನಾಗನು ಜನಮೇಜಯನ ವಂಶಜರಿಗೆತೊಂದರೆ ನೀಡುವ ಸಂಕಲ್ಪ ಮಾಡುವನು. ಖಾಂಡವವನದಲ್ಲಿ ನೆಲೆ ನಿಂತಿದ್ದ ತಕ್ಷಕನಿಗೆ ಜನಮೇಜಯನ ವಂಶಜನಾದ ಅರ್ಜುನ ಎದುರಾಳಿಯಾಗಿ ನಿಲ್ಲುತ್ತಾನೆ. ಅರ್ಜುನನಿಂದ ಸೋತು, ಗರ್ವಭಂಗ ಹೊಂದಿ ಪಾತಾಳ ಲೋಕವನ್ನು ಸೇರುತ್ತಾನೆ. ದ್ವಾಪರದಲ್ಲೇ ಸುಪ್ರಸಿದ್ಧ ನಾಗಲೋಕದ ಕಥಾನಕವೂ

ಪುಟ 11 ಕ್ಕೆ ➤

➢ ಪುಟ 10 ರಿಂದ.....

ಇದೆ. ಅರ್ಜುನ ಮಣಿಪುರದ ನಾಗಕನ್ಯೆ ಉಲೂಚಿಯನ್ನು ವಿವಾಹವಾಗಿ ಬಭ್ರುವಾಹನನೆಂಬ ವೀರಪುತ್ರ ಪಡೆದನೆಂಬ ಕಥೆಯಿದೆ. ಶ್ರೀ ಕೃಷ್ಣನ ಕಾಳಿಯ ಮರ್ದನವು ಅತ್ಯಂತ ಸ್ವಾರಸ್ಯಕರವೂ ಹಲವು ದೇವಾಲಯಗಳ ಕೆತ್ತನೆಯಲ್ಲಿ ಜೀವಂತವಾಗಿಯೂ ಉಳಿದಿದೆ.

ಭಾರತೀಯರಾದ ನಾವು ನಾಗರವನ್ನು ಸಾವು, ಪುನರ್ಜನ್ಮ, ಚಿರಂಜೀವತ್ವದ ಸ್ವರೂಪವಾಗಿ ಕಾಣುತ್ತೇವೆ. ಏಕಕಾಲದಲ್ಲೇ ಶುಭಕರನನ್ನಾಗಿಯೂ, ಅಶುಭಕಾರಕನಾಗಿಯೂ, ದೈವವಾಗಿಯೂ, ಆರೋಗ್ಯಪ್ರದಾಯಕನನ್ನಾಗಿಯೂ, ಸಂತಾನಕಾರಕನನ್ನಾಗಿಯೂ ಕಾಣುತ್ತೇವೆ.

ಭಾರತೀಯ ಶಿಲ್ಪಕಲೆಯಲ್ಲಿ 'ನಾಗರಶೈಲಿಯು' ಅತ್ಯಂತ ಪ್ರಸಿದ್ಧವಾಗಿದೆ. ದೇಗುಲಗಳ ಶಿಲ್ಪರಚನೆಯಲ್ಲಿ ನಾಗಗಳ ಚಿತ್ರಣ. ಶಿಲ್ಪರಚನೆಯನ್ನು ಎಲ್ಲೆಲ್ಲೂ ಕಾಣಬಹುದು. ಎಲ್ಲೋರಾದ ಜೋಡಿ ನಾಗರಗಳ ಶಿಲಾಮೂರ್ತಿ, ಅನಂತ ಪದ್ಮನಾಭ ದೇಗುಲದ ಶೇಷಶಯನ ಹರಿಯ ಮೂರ್ತಿ ಅಲ್ಲಿನ ಸಂಪತ್ತಿನ ರಕ್ಷಣೆಗಾಗಿ ಸ್ವಯಂ ಆದಿಶೇಷನೆ ಇರುವನೆಂಬ ನಂಬಿಕೆಯೊಂದಿಗೆ ಕೆತ್ತಲ್ಪಟ್ಟ ಸರ್ಪಗಳನ್ನು ಕಾಣಬಹುದು. ಶೃಂಗೇರಿಯ ಶಾರದಾ ಪೀಠದ ತುಂಗಾತಟದಲ್ಲಿ ನಾಗ ರಕ್ಷಣೆಯಲ್ಲಿರುವ ಮಂಡೂಕದ ಶಿಲ್ಪದ ಹಿಂದೆಅಮ್ನಾಯಪೀಠದ ಸ್ಥಳ ನಿರ್ಧರಿಸಲು ಶ್ರೀ ಶಂಕರಾಚಾರ್ಯರಿಗೆ ಕಾರಣವಾದ ಸತ್ಯ ಘಟನೆಯನ್ನು ಹೊಂದಿರುವ ಹಿನ್ನೆಲೆ ಇದೆ. ಹಾಗೆಯೆ ದೇಶದಲ್ಲಿ ನಾಗಗಳಿಗಾಗಿ ಪ್ರಸಿದ್ಧಿ ಹೊಂದಿರುವಂತಹ ಹಲವು ಸ್ಥಳ, ದೇವಾಲಯಗಳಿವೆ. ಅವು–ಮುನ್ನಾರ ಶಾಲಾ ದೇಗುಲ (ಕೇರಳ), ಕುಕ್ಕೆ ಸುಬ್ರಮಣ್ಯ(ಕರ್ನಾಟಕ), ಭುಜಂಗ ನಾಗ ದೇಗುಲ (ಗುಜರಾತ್), ತಿರುಗನಾಗೇಶ್ವರ ದೇವಸ್ಥಾನ (ತಿರುನಾಗೇಶ್ವರಂ), ನಾಗರಾಜದೇಗುಲ (ನಾಗರಕೊಯಿಲ್), ಘಾಟಿ ಸುಬ್ರಮಣ್ಯ (ಕರ್ನಾಟಕ) ಶೇಷನಾಗ ಸರೋವರ (ಕಾಶ್ಮೀರ) ಹೀಗೆ ಹಲವಾರು ಜಾಗೃತ ದೇವಸ್ಥಾನಗಳಿವೆ.

ಭಾರತೀಯ ಋಷಿ ಪರಂಪರೆಯವರು ಪ್ರಕೃತಿ ಹಾಗೂ ಮಾನವ ಎರಡೂ ಒಂದೇ "ಯಥಾ ಬ್ರಹ್ಮಾಂಡೆ ತಥಾ ಪಿಂಡಾಂಡೆ" ಎಂದು ಅತೀ ಮಹತ್ವದ ಸಂಗತಿಯನ್ನು ಸರಳೀಕೃತಗೊಳಿಸಿ ಜಗದ ಮುಂದಿಟ್ಟಿದ್ದಾರೆ. ಆ ದಿಶೆಯಲ್ಲಿ ಪಂತಜಲಿ ಮಹರ್ಷಿಯ ಯೋಗದರ್ಶನದಲ್ಲಿ ಉಲ್ಲೇಖಿಸಲಾಗಿರುವ ಕುಂಡಲಿನಿಯು ಒಂದು.

ಹೃದಯ ಪ್ರಜ್ಞೆಯ ಕೇಂದ್ರವಾಗಿದ್ದು ಅದು ದೇಹದ ಎಲ್ಲಾ ಅಂಗಕಾರ್ಯ ನಿರ್ವಹಿಸುತ್ತಿರುವ ಜೀವಾತ್ಮನ ನೆಲೆಯಾಗಿದೆ. ತಂತ್ರಗಳ ಕೂಟ ಅರಿವಿನ ಕೇಂದ್ರವನ್ನು ಚಕ್ರಗಳ ಮೂಲಕ ಬೆನ್ನೆಲುಬಿನ ದಾರಿಯಲ್ಲಿ ಸಾಗಿ ಹೃದಯದ ಮೂಲಕ ಶಿರದ ಊರ್ಧ್ವ ಭಾಗವಾದ ಮೆದಳಿನ ಸಹಸ್ರಾರ ಚಕ್ರ ಕಂಡುಕೊಳ್ಳುತ್ತೆ. ಸುಶಮ್ನಾ ಆಂತರಿಕ ಶಕ್ತಿಯಾಗಿದ್ದು ಅದನ್ನು ಬಲಗೊಳಿಸುವ ಮುನ್ನ ಇಡಾ ಹಾಗೂ ಮಂಗಳಾ ನಾಡಿಯಲ್ಲಿ ಶಕ್ತಿ ತುಂಬಬೇಕಾಗುತ್ತದೆ. ಇದು ಬೆನ್ನು ಮೂಳೆಯ ಮಜ್ಜೆ ಮೂಕಾಂತರ ಶಕ್ತಿ ಸಂಚಯವಾಗಿ ಪ್ರವಹಿಸುತ್ತಾ ಸಹಸ್ರಾರು ಚಕ್ರದ ಮೂಲಕ ಬ್ರಹ್ಮರಂಧ್ರ ತಲುಪಿ ಕುಂಡಲಿಯನ್ನು ಜಾಗೃತಗೊಳಿಸುತ್ತೆ. ಈ ಆಂತರಿಕ ಶಕ್ತಿಯನ್ನ 'ಶಕ್ತಿಕೇಂದ್ರ' ಅಥವಾ ಸರ್ಪಶಕ್ತಿ ಎಂದು ಕರೆಯುತ್ತಾರೆ. ಸುರಳಿಯಾಕಾರ ನಮ್ಮ ಶರೀರದ ಮಲಗಿರುವ ಸುಪ್ತ ಶಕ್ತಿಯನ್ನು ಎಚ್ಚರಿಸುವ (ಜಾಗೃತ) ಕ್ರಿಯೆಯೆ ಕುಂಡಲಿನಿ ಸೂಕ್ಷ್ಮ ಸರ್ಪದ ಕಣ್ಣಿನ ಭಾಗವು ಮಹತ್ತಾದ ಶಕ್ತಿಯನ್ನು ಹೊಂದಿದ್ದು ಅದನ್ನು ಅರಿತರೆ ಎಲ್ಲವನ್ನೂ ಗೆಲ್ಲಬಹುದೆಂದು ಭಾರತೀಯ ಪುರಾತನ ಗ್ರಂಥಗಳಲ್ಲಿ ಹೇಳಲಾಗಿದೆ.

ದೇಹದಲ್ಲಿ ಇಂದ್ರಿಯಗಳನ್ನು ಕುದುರೆ, ಮನಸ್ಸು–ಲಗಾಮು, ಬುದ್ಧಿ–ಸಾರಥಿ ಹಾಗೂ ಆತ್ಮರಥದಲ್ಲಿ ಕುಳಿತಿದ್ದು ಇಂದ್ರಿಯ, ಮನಸ್ಸು, ಬುದ್ಧಿಯನ್ನುಏಕಸೂತ್ರದಲ್ಲಿ ಬಂಧಿಸಿ ಆತ್ಮೋನ್ನತಿಯಾಗಲು 'ಯೋಗ' ಅತ್ಯುತ್ತಮ ಸಾಧನವಾಗಿದೆ. ಯೋಗವೆಂದರೆ ಚಿತ್ತದ ವೃತ್ತಿಗಳನ್ನು ನಿರೋಧಿಸುವುದು ತನ್ಮೂಲಕ ಜೀವನದ ಅಭಿವೃದ್ಧಿಗೆ ಸಾಧನೆ.

ಪ್ರಪಂಚದ ಇತರೆ ಭಾಗಗಳಲ್ಲೂ ಕೂಡ ಸರ್ಪಗಳ ಕುರಿತಾದ ವಿವರಣೆಯನ್ನು ಕಾಣಬಹುದು. ಅತ್ಯಂತ ಪ್ರಾಚೀನ ಕ್ರಿಪೂ. ಶ ಒಂದು ಮಿಲಿಯನ್ ವರ್ಷದ ಹಿಂದಿನ ಮಾಯನ್ನರ ನಾಗರೀಕತೆಯಲ್ಲಿ 'ಕುಕುಲಕನ್' ಅನ್ನುವುದು ನಾಗಗಳ ತಂದೆ (Father of serpents) ಎಂದು ಹೇಳಲಾಗಿದೆ. ಈ ಮಾಯನ್ನರ ಸಂತತಿಯು ನಾಲ್ಕು ಭಾಗಗಳಾಗಿ ವಿವದೆಡೆ ಹಂಚಿಹೋಗಿದ್ದು ಇವರ ಸಂತತಿಯು ಒಂದು ಸಂತತಿಯಾದ 'ಕೇಕಚಿ' ಮಾಯಾ ಎನ್ನುವ ನಾಗ ಮೂಲದವರು ಭಾರತದ ಅಸ್ಸಾಮಿನ, ನಾಗಾಲ್ಯಾಂಡಿನ ಅಹೋಂ ಜನರೆಂದು ಹೇಳಲಾಗುತ್ತದೆ. ಸುಮೇರಿಯನ್ನರು ಕ್ರಿ.ಪೂ.ಶ 210ರಲ್ಲೇ ಏಳು ತಲೆಯನ್ನು ಹೊಂದಿದ ನಾಗನನ್ನು ಪೂಜಿಸುತ್ತಿರುವುದು ಕಂಡುಬರುತ್ತದೆ.

ಕಂಚಿನ ಯುಗದಲ್ಲಿ ಗ್ರೀಕರು ಆಸ್ಕೆಲ್‌ಪಾಯಸ ಎಂಬ ಹೆಸರಿನ ದೇವತೆಯನ್ನು ಪೂಜಿಸುತ್ತಿದ್ದರು. ಜಪಾನೀಯರು, ರೈಯುಜಿನ್ ಎಂದು, ಈಜಿಪ್ಟ್‌ನಲ್ಲಿ ವಾಡ್‌ಜಿವದೇರ್ ಹಾಗೂ ಅಪಾಫೀಸ್‌ಎನ್ನುವ ಹೆಸರಿನಿಂದ ಪೂಜಿಸುತ್ತಿದ್ದರು. ಚೀನಿಯರು 8 ಮುಖದ ಬೃಹತ್ ಗಾತ್ರದ ಸರ್ಪಾಕೃತಿಯ 'ಡ್ರ್ಯಾಗನ್' ಎಂಬ ಜೀವಿಯನ್ನು ಆರಾಧಿಸುವರು. ಈ ಜೀವಿಯ ಕುರಿತಾಗಿ ಶಾಕ್ಯಮುನಿ ವಿರಚಿತ 'ಕಮಲ ಸೂತ್ರ'ದಲ್ಲಿ ಮಾಹಿತಿ ಇದೆ. ಕೊರಿಯನ್ನರು ಎಬ್‌ಶಿನ್ ಎನ್ನುವ ಸಮೃದ್ಧಿಯ ದೇವತೆ ರೂಪದಲ್ಲಿ ನಾಗನನ್ನು ಆರಾಧಿಸುತ್ತಿದ್ದರು. ಬುದ್ಧನ ಚರಿತ್ರೆಯಲ್ಲಿ ಮುಚಲಿಂದಾ ಎನ್ನುವ ನಾಗರಾಜನು ಸತತ ಏಳು ದಿನಗಳ ಕಾಲ ಧ್ಯಾನಾವಸ್ಥೆಯಲ್ಲಿದ್ದ ಬುದ್ಧನನ್ನು ಮಳೆಯಿಂದ ರಕ್ಷಿಸಲು ತನ್ನ ಹೆಡೆಯನ್ನು ಬಿಚ್ಚಿ ನೆರಳಿನಂತೆ ನಿಂತು ಸೇವೆಗೈದನು ಎಂದಿದೆ. ಜೈನ, ಬೌದ್ಧ ಧರ್ಮದಲ್ಲಿ ಪಾರ್ಶ್ವನಾಥ ಹಾಗೂ ತೀರ್ಥಂಕರರ ಶಿರದ ಹಿಂಭಾಗ ಹೆಡೆ ಬಿಚ್ಚಿರುವ ನಾಗಗಳ ಪ್ರಭಾವಳಿ ಕಾಣಬಹುದು. ಥೈಲ್ಯಾಂಡ್, ಕಾಂಬೋಡಿಯಾ, ಇಂಡೋಚೀನಾ ಇಲ್ಲೆಲ್ಲಾ ನಾಗಗಳ ಆರಾಧನೆ ಕುರುಹುಗಳಿವೆ. ಬೈಬಲ್‌ನಲ್ಲಿ ಕೂಡ ನಾಗನ ಕುರಿತಾಗಿ ಹಿಬ್ರೂ ಭಾಷೆಯಲ್ಲಿ ನಿಚಾಸ ಎನ್ನಲಾಗುವ ಹೆಸರಿನಿಂದ ಹೇಳಲಾಗಿದೆ. ಕೆಟ್ಟದರ ಸಂಕೇತವಾಗಿ ಬಳಸಲಾಗಿದೆ. ಹೀಗೆ ಹಲವಾರು ರಾಷ್ಟ್ರಗಳ ಇತಿಹಾಸ ಶೋಧಿಸಿದಾಗ ಪುರಾತನ ಜನಾಂಗದವರು ಜಾಗಗಳನ್ನು ಔಷಧಿಯ ದೇವತೆಯಾಗಿ ಸಮೃದ್ಧಿಯ, ಶಕ್ತಿಯ ಫಲವಂತಿಕೆಯ, ಸಾವಿನ, ಪುನರ್ಜನ್ಮದ, ಸಮಯ(ಕಾಲ)ವೆಂದೂ, ಹತ್ತು ಹಲವು ನಂಬಿಕೆಗಳನ್ನು ಹೊಂದಿ ಹಲವು ಸ್ವರೂಪಗಳಲ್ಲಿ (ಅರ್ಧನಾಗ ಅರ್ಧ ಮನುಷ್ಯ) ಪೂಜಿಸುತ್ತಿದ್ದರು.

ಕ್ರಿ.ಪೂ.ಶ 2 ಮಿಲಿಯನ್ ವರ್ಷಕ್ಕೂ ಹಿಂದಿನ ಜ್ಞಾನಭಂಡಾರದ ವೇದಗಳು ಪ್ರಕೃತಿಯೇ ಸರ್ವೋಚ್ಚ ಎಂದು ಹೇಳಿ ಆ ಪ್ರಕೃತಿಯಲ್ಲಿ ಇರುವ ಸರ್ಪ ಜೀವಿಗಳಲ್ಲೂ ಅದರದೇ ಆದ ಶಕ್ತಿ ಇದ್ದು ಕೆಲವೊಮ್ಮೆ ಆ ಶಕ್ತಿಯನ್ನು ಉದ್ದೀಪ್ತಗೊಳಿಸಿಕೊಂಡು ಸರ್ಪಶಕ್ತಿಗೊಳಿಸಿ ಸಮಾಜ ಮುಖಿಯಿಂದ ಆತ್ಮೋನ್ನತಿಯೇ ಅಂತಿಮ ಸಾಧನ ಎನ್ನುವುದನ್ನು ಕಲಿಸುತ್ತದೆ. ಭಾರತ ಕೇವಲ ಭೂಖಂಡವಲ್ಲಾ, ನೆಲವಲ್ಲಾ ಅದೊಂದು ಶಕ್ತಿ, ಪ್ರಪಂಚಕ್ಕೆ ಜ್ಞಾನ ಉಣಬಡಿಸಿದ ಜಗತ್ತಿನ ನಾಗರೀಕತೆಯ ಮೊದಲ ತೊಟ್ಟಿಲು ಭಾರತವೇ. ●

**ಮೌಲ್ಯೋಪಾಸನೆ**

# ಬಿಳಿಯ ಆನೆಯ ಕಥೆ

■ ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

ಒಂದು ಕಾಡಿನಲ್ಲಿ ಬೇಟೆಯಾಡಲು ಬಂದ ಬೇಡನಿಗೆ ದಾರಿ ತಪ್ಪಿತು. ಎಲ್ಲೆಲ್ಲೋ ಅಲೆಯುತ್ತಿದ್ದವನಿಗೆ ಹಠಾತ್ತಾಗಿ ಒಂಟಿ ಸಲಗವೊಂದು ಎದುರಾಗಿತ್ತು. ಪ್ರಾಣಭೀತಿಯಿಂದ ನಡುಗುತ್ತಿದ್ದವನನ್ನು ಕಂಡು ಸಮೀಪಕ್ಕೆ ಬಂದು, ಮಾನವ ಭಾಷೆಯಲ್ಲಿಯೇ ಮಾತನಾಡಿತ್ತು, ಆ ಬಿಳಿಯ ಆನೆ. ಆಶ್ಚರ್ಯದಿಂದಲೇ ನೋಡುತ್ತಿದ್ದ ಬೇಡನನ್ನು ಕುರಿತು ಅದು ಹೇಳಿತ್ತು. “ಎಲೈ, ಮಾನವನೇ ಭಯಪಡಬೇಡ, ನಾನು ನಿನಗೇನೂ ಅಪಾಯ ಮಾಡುವುದಿಲ್ಲ. ನಿನಗೆ ದಾರಿ ತಪ್ಪಿದೆಯೆಂದು ಆತಂಕ ಬೇಡ, ನನ್ನ ಬೆನ್ನ ಮೇಲೆ ಕುಳಿತುಕೊ. ನಿನ್ನ ಊರ ದಾರಿಗೆ ಕರೆದೊಯ್ಯುತ್ತೇನೆ, ಮತ್ತೆ ನಿನಗೇನಾದರೂ ಸಹಾಯ ಬೇಕಾದರೆ ನನ್ನನ್ನು ಕೇಳು.”

ಆನೆಯ ನೆರವಿನಿಂದಲೇ ಊರನ್ನು ತಲುಪಿ, ನಂತರ ತನ್ನ ಮನೆಯನ್ನು ಸುರಕ್ಷಿತವಾಗಿ ತಲುಪಿದ್ದ ಆ ಬೇಟೆಗಾರ. ಒಂದೆರಡು ದಿನಗಳ ನಂತರ ಮಾರುಕಟ್ಟೆಯಲ್ಲಿ ಸುತ್ತಾಡುತ್ತಿದ್ದವನಿಗೆ ಅಂಗಡಿಯೊಂದರಲ್ಲಿ ಆನೆಯ ದಂತವನ್ನು ಮಾರಾಟ ಮಾಡುತ್ತಿರುವುದು ಕಂಡಿತ್ತು. ಬೆಲೆಯೂ ತುಂಬಾ ದುಬಾರಿಯಾಗಿತ್ತು. ಹಾಗೇ ವಿಚಾರಿಸಿದವನಿಗೆ ಅಂಗಡಿಯವನು ಆನೆಯ ದಂತಕ್ಕೆ ಯಾವಾಗಲೂ ತುಂಬ ಬೆಲೆಯಿರುತ್ತದೆಂದು ಹೇಳಿದ್ದ. ಬೇಟೆಗಾರ ಕೇಳಿದ್ದ ‘ಇದು ಸತ್ತ ಆನೆಯ ದಂತವಲ್ಲವೇ? ಜೀವಂತ ಆನೆಯ ದಂತವನ್ನೂ ಕೊಳ್ಳುತ್ತೀರಾ?’ ಅಂಗಡಿಯವನು “ಅಯ್ಯೋ! ಅದೆಲ್ಲಿ ಸಿಕ್ಕುತ್ತದೆ? ಹಾಗೇನಾದರೂ ಸಿಕ್ಕಿದರೂ ಇದರ ದುಪ್ಪಟ್ಟು ಬೆಲೆ ಕೊಟ್ಟು ಖರೀದಿಸಲು ನಾನು ಸಿದ್ಧ”. ಮನಸ್ಸಿನಲ್ಲಿಯೇ ಏನೋ ಲೆಕ್ಕಾಚಾರ ಹಾಕಿದ್ದ ಬೇಟೆಗಾರ ಮಾರನೇ ದಿನ ಅರಣ್ಯಕ್ಕೆ ಹೋದ. ಅಲ್ಲಿ ಬಿಳಿಯ ಆನೆಯು ಕಂಡಿತ್ತು. ಬೇಡನ ಸಪ್ಪೆ ಮುಖವನ್ನು ಕಂಡು ಕಾರಣವೇನೆಂದು ವಿಚಾರಿಸಿತ್ತು. ಆಗ ಬೇಡ ತಾನು ತುಂಬ ಕಷ್ಟದಲ್ಲಿದ್ದೇನೆಂದೂ, ಬಡತನದ ಕಾರಣದಿಂದ ಮನೆಯಲ್ಲಿ ಹೆಂಡತಿ, ಮಕ್ಕಳಿಗೆ ಊಟಕ್ಕೂ ತೊಂದರೆಯಾಗುತ್ತಿರುವುದಾಗಿ ತನ್ನ ಅಳಲನ್ನು ತೋಡಿಕೊಂಡ. ಬಿಳೀ ಆನೆ ತಾನೇನು ಸಹಾಯ ಮಾಡಬಹುದೆಂದು ಅನುಕಂಪದಿಂದ ಕೇಳಿತ್ತು. “ಇನ್ನ ದಂತದಲ್ಲಿ ಒಂದು ಚೂರು ಕಿತ್ತು ಕೊಡುವೆಯಾ? ಅದನ್ನು ಮಾರಿದರೆ ನನಗೆ ದುಡ್ಡು ಸಿಕ್ಕುತ್ತದೆ. ನನ್ನ ಕಷ್ಟ ನೀಗುತ್ತದೆ” ಎಂದು ಬೇಡಿದವನನ್ನು ಕಂಡು ಮರುಕದಿಂದ ಆನೆ ತನ್ನ ಎಡಭಾಗದ ದಂತದಿಂದ ಒಂದು ಚೂರು ಕಿತ್ತುಕೊಟ್ಟಿತ್ತು.

ಬೇಡ, ದಂತದ ಚೂರನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡಲು ಹೋಗಿ, ಜೀವಂತ ಆನೆಯ ದಂತವೆಂದು ಹೇಳಿದಾಗ ದುಪ್ಪಟ್ಟು ಹಣ ಸಿಕ್ಕಿತ್ತು. ಕೆಲವು ದಿನಗಳ ನಂತರ ಅವನ ಆಸೆ ಮತ್ತೆ ಗರಿಗೆದರಿತ್ತು. ಮತ್ತೆ ಕಾಡಿಗೆ ಹೋಗಿ ಬಿಳೀ ಆನೆಯ ಮುಂದೆ ತನ್ನ ಬಡತನವನ್ನು ವರ್ಣಿಸಿ ಎಡಭಾಗದಲ್ಲಿ ಉಳಿದಿದ್ದ ದಂತವನ್ನು ಪಡೆದುಕೊಂಡ. ಈ ಬಾರಿ ಹೆಚ್ಚು ಪ್ರಮಾಣದ ದಂತದಿಂದ ಹೆಚ್ಚು ಹಣವೂ ಸಿಕ್ಕತ್ತು. ಮತ್ತೆ ಕೆಲವು ದಿನಗಳನ್ನು ಬೇಡ ಯಾವ ಶ್ರಮ ಪಡದೆ ಸುಖವಾಗಿ, ಸೋಮಾರಿಯಾಗಿ ಕಳೆದಿದ್ದ. ಹಣ ಸುಲಭವಾಗಿ ದೊರೆಯುವ ಮಾರ್ಗ ಅವನಿಗೆ ಕಂಡಿನತ್ತ ಕೈಯಲ್ಲಿದ್ದ ಹಣ ಖಾಲಿಯಾಗಿತ್ತು. ಬೇಡನ ಸವಾರಿ ಮತ್ತೆ ಕಾಡಿನತ್ತ! ಹೊರಟಿತ್ತು. ಈ ಬಾರಿ ಬಿಳೀ ಆನೆ ತನ್ನ ಬಲಭಾಗದ ದಂತವನ್ನೂ ನೀಡಿತ್ತು. ಅದರಿಂದ ಬಂದ ಹಣದಿಂದ ಬೇಡನು ಶ್ರೀಮಂತನೇ ಆಗಿದ್ದ. ದೊಡ್ಡದಾದ ಮನೆಯೊಂದನ್ನು ಕಟ್ಟಿಕೊಂಡ. ಆದರೆ ಆಸೆ ಇಂಗಲಿಲ್ಲ, ತೃಪ್ತಿ ಬರಲಿಲ್ಲ, ಮತ್ತಷ್ಟು ಹಣ ಸಂಪಾದಿಸುವ ಆಸೆಯಾಗಿತ್ತು. ಮಾರುಕಟ್ಟೆಗೆ ಹೋಗಿ ಕೇಳಿದಾಗ “ಆನೆ ಇದ್ದರೂ ಬೆಲೆ, ಹೋದರೂ ಬೆಲೆ ಅದರ ಮೂಳೆಗಳನ್ನು ತಂದರೆ ಅಪಾರ ಧನರಾಶಿಯನ್ನೇ ನೀಡುತ್ತೇನೆ” ಎಂದಿದ್ದ ಅಂಗಡಿಯಾತ. ದುರಾಸೆಯ ಬೇಡ ಮತ್ತೆ ಆನೆಯ ಬಳಿಗೆ ಸಪ್ಪೆ ಮುಖ ಹೊತ್ತುಹೋದ. “ಏನಪ್ಪಾ ನಿನ್ನ ಕಷ್ಟ ಇನ್ನೂ ಕಳೆಯಲಿಲ್ಲವೇ?” ಎಂದು ಪ್ರೀತಿಯಿಂದ ಕೇಳಿತ್ತು ಬಿಳೀ ಆನೆ. “ತುಂಬ ತೊಂದರೆಯಲ್ಲಿದ್ದೇನೆ, ಹಣಬೇಕಾಗಿದೆ, ಎಲ್ಲೂ ಸಿಕ್ಕುತ್ತಿಲ್ಲ” ಎಂದು ಬೇಡ ಸಣ್ಣ ದನಿಯಲ್ಲಿ ಹೇಳಿದ್ದ. ಬಿಳೀ ಆನೆ ಕೇಳಿತ್ತು. “ನಾನೇನು ಸಹಾಯ ಮಾಡಬಲ್ಲೆ? ಎರಡೂ ದಂತಗಳನ್ನೂ ಕೊಟ್ಟುಬಿಟ್ಟಿದ್ದೇನೆ, ನನ್ನ ಬಳಿ ಇನ್ನೇನೂ ಇಲ್ಲವಲ್ಲ?” ಬೇಡ ಹೇಳಿದ್ದ “ನಿನ್ನ ಮೂಳೆಗಳನ್ನೂ ಹಣಕೊಟ್ಟು ಕೊಳ್ಳುತ್ತಾರಂತೆ, ಕೊಡುತ್ತೀಯಾ”? ಕೂಡಲೇ ಆನೆ ಉತ್ತರಿಸಿತ್ತು. “ನಿನ್ನ ಕಷ್ಟ ಕಳೆಯುವುದಾದಲ್ಲಿ ನಾನು ಕೊಡಲು ಸಿದ್ಧನಿದ್ದೇನೆ. ತೆಗೆದುಕೋ” ಎಂದು ಹೇಳಿ ಅವನ ಮುಂದೆ ಬಾಗಿ ಕುಳಿತುಕೊಂಡಿತ್ತು. ದುರಾಸೆಯ ಬೇಡ ಕೈಯಲ್ಲಿ ಕತ್ತಿ ಹಿಡಿದೇ ಹೋಗಿದ್ದ. ಆನೆ ಹೇಳಿದ ಕೂಡಲೇ ಕತ್ತಿ ಹಿಡಿದು ಆನೆಯನ್ನು ಕೊಂದು, ಅದರ ಶರೀರವನ್ನೆಲ್ಲ ಕತ್ತರಿಸಿ ತುಂಡು ಮಾಡಿ, ಮೂಳೆಗಳನ್ನೆಲ್ಲ ಒಟ್ಟು ಮಾಡಿಕೊಂಡ, ಎಲ್ಲ ದೊಡ್ಡ ಮೂಟೆಯೇ ಆಗಿತ್ತು. ಹೊರಲಾರದ ಹೊರೆ ಹೊತ್ತು ಎದ್ದು ನಿಂತ. ಒಂದು ಹೆಜ್ಜೆಯನ್ನೂ ಇಟ್ಟ, ಮನುಷ್ಯನ ದುರಾಸೆಯ ಪರಮಾವಧಿಯನ್ನು ಕಂಡು ಸಹನಾಧರಿತ್ರಿಯಾದ ಭೂತಾಯಿಯ ತಾಳ್ಮೆಯೂ ಮಿತಿಮೀರಿತ್ತು. ಬೇಡನ ಕಾಲಿನ ಕೆಳಗಿನ ಭೂಮಿ ಬಾಯಿಬಿಟ್ಟಿತ್ತು, ದೊಡ್ಡ ಬಿರುಕು ಉಂಟಾಗಿತ್ತು. ಬೇಡನನ್ನು, ಆತ ಹೊತ್ತ ಆನೆಯ ಮೂಳೆಗಳ ರಾಶಿಯೊಂದಿಗೆ ತನ್ನ ಗರ್ಭದಲ್ಲಿ ಸೇರಿಸಿಕೊಂಡಿತ್ತು.

ಮೂಲ: – (ಬೋಧಿಸತ್ವನ ಕಥೆಗಳು)

# ಯಾವುದರಿಂದ ನಮಗೆ ಪ್ರೇರಣೆ ಸಿಕ್ಕೀತು?

ಸೀತಾಪತಿ
ಬೆಂಗಳೂರು

**ಕಲ್ಬುರ್ಗಿಯಲ್ಲಿ 12-7-2020ರ ಭಾನುವಾರ ಸಂಜೆ 6-30 ಘಂಟೆಗೆ ನಡೆದ ಗುರುವಂದನಾ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಮಹಾಪೋಷಕರಾದ ಶ್ರೀ ಹೆಚ್. ನಾಗಭೂಷಣ ರಾವ್‌ರವರ ಭಾಷಣದ ಸಾರಂಶ**

ನಮ್ಮೆಲ್ಲರ ಜೀವನದಲ್ಲಿ ಕೆಲವೊಂದು ಕ್ಷಣಗಳಿವೆ. ನಾವು ಮುಂಜಾನೆ ಎದ್ದು "ಯಾಕಪ್ಪಾ ಬೆಳಗಾಯಿತು, ಇನ್ನು ಈ ದಿನದ ಚಕ್ರ ಶುರುವಾಯಿತು, ಸಿದ್ಧರಾಗಿ ಕೆಲಸಕ್ಕೆ ಹೋಗಬೇಕು, ಉತ್ಸಾಹವೇ ಇಲ್ಲ, ಯಾಕಾದರೂ ಸೂರ್ಯ ಹುಟ್ಟುತ್ತಾನೋ? ಅವನಿಗಂತೂ ಇನ್ನೇನು ಕೆಲಸವೇ ಇಲ್ಲವೇನೋ" ಎಂದು ಅಂದುಕೊಳ್ಳುತ್ತೇವೆ. ನಾನೇಕೆ ಈ ಕೆಲಸವನ್ನು ಮಾಡುತ್ತಿದ್ದೇನೆ? ನಿತ್ಯ ಇದನ್ನೇ ಮಾಡಬೇಕಲ್ಲ? ನಾ ಮಾಡುವುದರಲ್ಲಿ ಸಾರ್ಥಕತೆಯಾದರೂ ಏನು? ನನ್ನನ್ನು ನಾನೇ- ಮೋಟಿವೇಟ್- ಪ್ರೇರೇಪಿಸಿಕೊಳ್ಳದಿದ್ದರೆ ಬೇರೆಯವರನ್ನು ಪ್ರೇರೇಪಿಸುವುದಾದರೂ ಹೇಗೆ? ಈ ಎಲ್ಲ ಸಂಗತಿಗಳೂ, ಪ್ರಶ್ನೆಗಳೂ ವೃತ್ತಿ ನಿರತರಾದ ಬಹಳಷ್ಟು ಜನರಿಗೆ ಬರುವುದು ನ್ಯಾಯಸಮ್ಮತವಾದದ್ದೇ. ಆದರೆ ಅಧ್ಯಾಪನ ವೃತ್ತಿ ಹಿಡಿದ ನಮಗೆ ಇದು ವಿಶೇಷವಾದದ್ದು. ಯಾಕೆಂದರೆ ಶಿಕ್ಷಕರಾದ ನಾವೇ ಭಾವೀ ಜನಾಂಗವನ್ನು ನಿರ್ಮಿಸುವ ಹೊಣೆ ಹೊತ್ತವರು. ಮುಂದಿನ ಪೀಳಿಗೆಗಳಲ್ಲಿ ಜೀವನ ಮೌಲ್ಯಗಳನ್ನು ತುಂಬಬೇಕಾದವರು. ಹೀಗಿದ್ದಾಗ ನಮ್ಮ ವಿದ್ಯಾರ್ಥಿಗಳಲ್ಲಿ "ತಾನು ಅತ್ಯುತ್ತಮ ವಿದ್ಯಾರ್ಥಿಯಾಗಬೇಕು, ಜೀವನದಲ್ಲಿ ಹತ್ತು ಜನರು ಮೆಚ್ಚುವಂತ ಕೆಲಸ ಮಾಡಬೇಕು, ಜನ್ಮ ಕೊಟ್ಟ ತಂದೆ ತಾಯಿಯವರಿಗೆ ಕೀರ್ತಿ ತರುವಂಥ ಮಗ/ ಮಗಳಾಗಬೇಕು" ಎಂಬ ಪ್ರೇರಣೆಯನ್ನು ತುಂಬದಿದ್ದಲ್ಲಿ, ನಾವು ನಮ್ಮ ವೃತ್ತಿಯಲ್ಲಿ ಸೋತಂತೆ.

ಹಾಗಾದರೆ ನಮ್ಮ ವೃತ್ತಿ ಜೀವನದಲ್ಲಿ ನಮಗೆ ಪ್ರೇರಣೆ ಕೊಡುವ -ಮೋಟಿವೇಟ್ ಮಾಡುವ ಸಂಗತಿಯಾವುದು?

**ಒಂದೊಂದೇ ಅಂಶವನ್ನು ತೆಗೆದುಕೊಂಡು ಚಿಂತಿಸೋಣ:-**

'ಎಲ್ಲರೂ ಮಾಡುವುದು ಹೊಟ್ಟೆಗಾಗಿ, ಗೇಣುಬಟ್ಟೆಗಾಗಿ' ಎಂದು ಪುರಂದರದಾಸರು ಹಾಡಿದ್ದಾರೆ. ನಾವೆಲ್ಲ ವೃತ್ತಿ ಜೀವನಕ್ಕೆ ಪ್ರವೇಶಿಸಿದ್ದು ಇದೇ ಕಾರಣಕ್ಕಾಗಿ. ನಮ್ಮ ತಂದೆ ತಾಯಿಯನ್ನು ಪೋಷಿಸಬೇಕು, ಒಂದು ಹಂತದ ನಂತರ ತನ್ನ ಮಡದಿ ಮಕ್ಕಳನ್ನು ಸಾಕಬೇಕು, ನಿಜ. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು, ಸ್ವಂತ ಮನೆ ಕಟ್ಟಿಕೊಳ್ಳಬೇಕು, ಸಂಚಾರಕ್ಕೆ ವಾಹನ ಕೊಳ್ಳಬೇಕು, ಈ ಕಾರಣಕ್ಕಾಗಿ ನಾನು ಧನ ಸಂಪಾದನೆ ಮಾಡಬೇಕು, ಹೆಚ್ಚು ಹಣ ಸಂಪಾದನೆ ಮಾಡಿದರೆ ಹೆಚ್ಚೆಚ್ಚು ನೆಮ್ಮದಿ ಅದಕ್ಕಾಗಿ ಪ್ರೈವೇಟ್ ಟ್ಯೂಷನ್. ಓರ್ವ ಶಿಕ್ಷಕನಿಗೆ ಈ ಎಲ್ಲ ಭಾವನೆಗಳಿದ್ದರೆ ಅದು ತಪ್ಪಲ್ಲ. ಅದು ನ್ಯಾಯ ಸಮ್ಮತವಾದುದೇ. ಅನೇಕರು ಕಡಿಮೆ ಸಂಬಳ ಎಂದು ಶಿಕ್ಷಕ ವೃತ್ತಿಯನ್ನು ತೊರೆದದ್ದನ್ನು ನಾನು ಕಂಡಿದ್ದೇನೆ. ಇನ್ನು ಅನೇಕರು 'ಕಾಸಿಗೆ ತಕ್ಕ ಕಜ್ಜಾಯ' ಎಂಬಂತೆ, ಉತ್ಸಾಹ ಕಳೆದುಕೊಂಡು ಪಾಠ ಮಾಡಿರುವುದೂ ಉಂಟು.

ಆದರೆ 'ಹಣ ಸಂಪಾದನೆ' ಎಂಬುದು ಓರ್ವ ಅಧ್ಯಾಪಕನ ಜೀವನಕ್ಕೆ ಪ್ರೇರಣೆಯಾದಿತಾ?

ಇನ್ನು ಎರಡನೇ ಅಂಶಕ್ಕೆ ಬರುವುದಾದರೆ ನಮಗಿರುವ ಸೌಲಭ್ಯಗಳು ಬೇರೆಲ್ಲ ವೃತ್ತಿಯವರಿಗೆ ಇಲ್ಲ. ದಿನದಲ್ಲಿ 8-9ಗಂಟೆ ದುಡಿಯಬೇಕಾಗುತ್ತದೆ. ಪೋಲೀಸಿನವರಿಗೆ, ವೈದ್ಯರಿಗೆ ಸಮಯದ ಮಿತಿಯ ಇಲ್ಲ. ಆದರೆ ಶಿಕ್ಷಕರಾದವರಿಗೆ ದಿನದಲ್ಲಿ 5-6 ಅವಧಿಗಳು. ಓರ್ವ ಕಾರ್ಮಿಕನಿಗೆ ಕೆಲಸ ಮುಗಿಸಿ ಮನೆಗೆ ಹೋದರೆ ಸುಸ್ತೋ ಸುಸ್ತು ಮಲಗಿದರೆ ಸಾಕೆನ್ನುವ ಮನಸ್ಥಿತಿ. ಆದರೆ ನಮಗೆ ಸಾಹಿತ್ಯ, ಸಂಗೀತ ಎಂದು ನಮ್ಮ ಪ್ರವೃತ್ತಿಗಳನ್ನು ಪೋಷಿಸಲು ಸಮಯವುಂಟು. ಇನ್ನು ವರ್ಷದಲ್ಲಿ ದಸರೆ ರಜೆ, ಬೇಸಿಗೆ ರಜೆ ಎಂದು ಸಾಕಷ್ಟು ಸಮಯದವುಂಟು.

ಈ ಸೌಲಭ್ಯಗಳಿವೆ ಎಂಬುದು ನಮಗೆ ಪ್ರೇರಣೆಯಾದೀತಾ? Can these benefits motivate a person to become a good teacher?

ಇನ್ನು ಮೂರನೇ ಅಂಶಕ್ಕೆ ಬರ್ತೀನಿ. ಅಧ್ಯಾಪಕ ಹುದ್ದೆಯಲ್ಲಿ ಪ್ರಮೋಷನ್ ಎಂಬ ಒಂದು ಹಂತವಿದೆ. ಪ್ರಾಥಮಿಕ ಶಾಲಾ ಅಧ್ಯಾಪಕರು ಹೈಸ್ಕೂಲ್ ಅಧ್ಯಾಪಕರಾಗಬಹುದು. ಹೈಸ್ಕೂಲ್ ಅಧ್ಯಾಪಕರು ಮುಖ್ಯೋಪಾಧ್ಯಾಯರಾಗಬಹುದು ಅಥವಾ ಪಿ ಯು ಕಾಲೇಜು ಅಧ್ಯಾಪಕರಾಗಬಹುದು. ಸ್ನಾತಕೋತ್ತರ ಪದವಿ ಇದ್ದಲ್ಲಿ ಕಾಲೇಜು ಅಧ್ಯಾಪಕರಾಗುವ, ಉಪನ್ಯಾಸಕ, ಸಹಾಯಕ ಪ್ರಾಧ್ಯಾಪಕ, ಪ್ರಾಧ್ಯಾಪಕ,, ಪ್ರಾಚಾರ್ಯ, ಹೆಚ್‌ಒಡಿ ಈ ರೀತಿ ವೃತ್ತಿ ಜೀವನದ ಏಣಿಯ ಒಂದೊಂದೇ ಮೆಟ್ಟಿಲು ಏರಬಹುದು. ಪದವಿ, ಸ್ನಾತಕೋತ್ತರ ಪದವಿಗಳಿಸಿದ ಅಧ್ಯಾಪಕರು ತಾವು ಮೊದಲ ಹೆಜ್ಜೆ ಇಟ್ಟ ಸಂಸ್ಥೆಯಲ್ಲಿನ ಮೊದಲ ದಿನದಿಂದ ಈ ಬಗೆಯ ಆಸೆಯನ್ನ ಇಟ್ಟುಕೊಳ್ಳಬಹುದು ಇದು ತಪ್ಪಲ್ಲ, ಅತ್ಯಂತ ನ್ಯಾಯ ಸಮ್ಮತವಾದುದು. ಆದರೆ ಮೇಲೇರುವ ಆಸೆ ನಾವು ಶ್ರೇಷ್ಠ ಅಧ್ಯಾಪಕರಾಗುವುದಕ್ಕೆ ಪ್ರೇರಣೆ ನೀಡಿತೇ?

ಇನ್ನನೇಕ ಶಿಕ್ಷಕರಿದ್ದಾರೆ, ಅವರಿಗೆ ಅವಕಾಶ ಸಿಕ್ಕಲ್ಲಿ ಕೆಪಿಎಸ್‌ಸಿ ಪರೀಕ್ಷೆ ಕಟ್ಟಿ Commercial Tax, RTO, ಪೊಲೀಸ್ ಇಲಾಖೆಗೆ ಸೇರುವ ತವಕವಿರುತ್ತದೆ ಆದರೆ ಅನಿವಾರ್ಯ ಕಾರಣದಿಂದ ಶಿಕ್ಷಕರಾಗಿರುತ್ತಾರೆ. ಪ್ರತಿದಿನ ತಮ್ಮನ್ನು ತಾವು ಹಳಿದುಕೊಳ್ಳುತ್ತಾರೆ. ಇಂಥವರು ವೃತ್ತಿಯಿಂದ ಶಿಕ್ಷಕರು ಪ್ರವೃತ್ತಿಯಿಂದಲ್ಲ!

ಮರಳುಗಾಡಿನಲ್ಲಿ ಓಯಸಿಸ್‌ನಂತೆ ಅನೇಕರಿದ್ದಾರೆ. ಅವರು ಅಪರೂಪದ ಹಕ್ಕಿಗಳಂತೆ, ಅವರಿಗೆ ಈ ಮೇಲಿನ ಯಾವ 3 ಅಂಶಗಳ ಬಗ್ಗೆಯೂ ಯೋಚಿಸುವುದಿಲ್ಲ. ಈ ಮೂರು ಅಂಶಗಳನ್ನು ತೂಗಿನೋಡಿ, ಇಲ್ಲ ನಾನು ಉತ್ತಮ ಶಿಕ್ಷಕನಾಗಬೇಕು ಮುಂದಿನ ಪೀಳಿಗೆಗಳನ್ನು ಸುಂದರ ವಿಗ್ರಹಗಳಾಗಿ ಕೆತ್ತಿ ನಿಲ್ಲಿಸುವ ಶಿಲ್ಪಿಯಾಗಬೇಕು. ವಿವೇಕಾನಂದರಂತೆ Man Making -ಮನುಷ್ಯನಿರ್ಮಿತಿಯೇ- ನನ್ನ ಜೀವನದ ಗುರಿ ಎಂದು ಕಾಲನ ಕರೆಗೆ ಓಗೊಟ್ಟವರು. ಇಂತವರನ್ನು The teachers with capital T ಎನ್ನೋಣವೇ?

**ಕಾಲನ ಕರೆ**

ನಮಗಿಂದು ಬೇಕಿರುವುದು teachers with capital 'T' ಎಂಬಂಥ ಅಧ್ಯಾಪಕರು. ಅವರು ಕೇವಲ ಪಠ್ಯ ಪುಸ್ತಕ

ಪುಟ 14 ಕ್ಕೆ ➤

➢ ಪುಟ 13 ರಿಂದ.....

ಬೋಧಿಸುವವರಲ್ಲ. ಓರ್ವ ಕುವೆಂಪುರವರನ್ನು ಸೃಷ್ಟಿಸಿದ ಟಿ.ಎಸ್ ವೆಂಕಣಯ್ಯ, ಎ.ಆರ್ ಕೃಷ್ಣಶಾಸ್ತ್ರಿಗಳಂತೆ, ಓರ್ವ ಅಬ್ದುಲ್ ಕಲಾಂರವರನ್ನು ನಿರ್ಮಿಸಿದ ಸುಬ್ರಮ್ಹಣ್ಯ ಅಯ್ಯರ್‌ರವರಂತೆ, ಅಪರೂಪದ ವ್ಯಕ್ತಿತ್ವ ಹೊಂದಿದವರು. ತಮ್ಮ ವಿದ್ಯಾರ್ಥಿಗಳನ್ನು ಹಿಮಾಲಯದೆತ್ತರಕ್ಕೇರಲು ಪ್ರೇರೇಪಿಸಿದವರು. Those who inspire their students to walk an extra mile. ಇಲ್ಲಿ ಒಂದಂಶವನ್ನು ನಾವು ಗುರುತಿಸಬೇಕು. ತಾನು ಸ್ವತಃ ಉರಿಯದ ದೀಪ ಮತ್ತೊಂದನ್ನು ಹಚ್ಚಲಾರದು. ಸ್ವಪ್ರೇರಣೆ ಇಲ್ಲದೆ ಇರುವ ಯಾರೊಬ್ಬರೂ ಇನ್ನೊಬ್ಬರನ್ನು ಪ್ರೇರಿಸಲಾರರು. ರಾಮೃಷ್ಣಪರಮಹಂಸರಲ್ಲಿ ಹೊತ್ತುರಿಯುತ್ತಿದ್ದ ದಿವ್ಯ ತೇಜಸ್ಸು ವಿವೇಕಾನಂದರ ಜೀವನ ಬೆಳಗಿಸಿತು. ವಿವೇಕಾನಂದರಲ್ಲಿ ಹೊತ್ತುರಿಯುತ್ತಿದ್ದ ದೀನದಲಿತರ ಸೇವಾಭಾವ ರಾಮಕೃಷ್ಣ ಮಠದ ಸಂನ್ಯಾಸಿಗಳನ್ನು ತಯಾರು ಮಾಡಲು ಸಾಧ್ಯವಾಯಿತು.

ನಿಜವಾಗಿ ನಾವು ಅಧ್ಯಯನ–ಅಧ್ಯಾಪನದಲ್ಲಿ ತೀವ್ರ ಆಸಕ್ತಿ, ಅಭಿರುಚಿಯುಳ್ಳವರಾದರೆ ಆ ಕಿಡಿಯನ್ನು ಕಳೆದುಕೊಳ್ಳದಿರೋಣ. ಜ್ಞಾನಾರ್ಜನೆಯ ಈ ಅಭಿರುಚಿ ಆಸಕ್ತಿಗಳು ಕರೋನಾದಂತೆ ಎಪಿಡಮಿಕ್– ಸಾಂಕ್ರಾಮಿಕ–ವಾಗಲಿ. ಇಂಥ ಅಧ್ಯಾಪಕರು ಕೇವಲ ಶಿಕ್ಷಕರಲ್ಲ. ಅವರು ಭವಿಷ್ಯದ ಪೀಳಿಗೆಗಳಿಗೆ ಜ್ಞಾನದ ಸೊಡರನ್ನು ಹಚ್ಚು ದೀಪಗಳಂತೆ, ಜೀವನ ಮೌಲ್ಯಗಳ ಭಂಡಾರವನ್ನು ತೆರೆದಿಡಬೇಕೆಂಬ ಕನಸನ್ನು ತಮ್ಮ ಜೀವನ ಧ್ಯೇಯವಾಗುಳ್ಳ (life mission)– ಮಹಾನ್‌ಕಲಾಕಾರರು. ಇಂಥವರಿಗೇ ನಮ್ಮಲ್ಲಿ

ಗುರುಃಬ್ರಹ್ಮಾ – ಸೃಷ್ಟಿಕರ್ತ

ಗುರುಃವಿಷ್ಣು – ಸೃಷ್ಟಿಪಾಲಕ

ಗುರುಃ ಮಹೇಶ್ವರ – ಲಯಕರ್ತ

ವಿದ್ಯಾರ್ಥಿಗಳನ್ನು ಶ್ರೇಷ್ಠವ್ಯಕ್ತಿಗಳಾಗಿ ಸೃಷ್ಟಿಸುವ ಬ್ರಹ್ಮನಂತೆ

ವಿದ್ಯಾರ್ಥಿಗಳಲ್ಲಿ ಶ್ರೇಷ್ಠ ಮೌಲ್ಯಗಳನ್ನು ಬಿತ್ತಿ ಪೋಷಿಸುವ ಪಾಲಕ ವಿಷ್ಣುವಿನಂತೆ

ವಿದ್ಯಾರ್ಥಿಗಳಲ್ಲಿನ ಅವಗುಣಗಳ ಕಳೆಯನ್ನು ಕಿತ್ತು ನಾಶಮಾಡುವ ಲಯಕರ್ತ ಈಶ್ವರನಂತೆ ಎಂದು ಕರೆದಿರುವುದು.

ಇಂಥ ಶಿಕ್ಷಕರನ್ನು ಯಾವ ವಿದ್ಯಾರ್ಥಿಯೂ ತನ್ನ ಜೀವನದಲ್ಲಿ ಮರೆಯಲಾರ.

•

# ಕ.ರಾ.ಮಾ.ಶಿ.ಸಂಘ, ಬೆಂಗಳೂರು ಉತ್ತರ ಜಿಲ್ಲೆಯ ಗುರುವಂದನಾ ಕಾರ್ಯಕ್ರಮ



ಗೂಗಲ್ ಮೀಟ್ ಮೂಲಕ ದಿನಾಂಕ 13.07.20 ರ ಸೋಮವಾರದಂದು ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ ಗುರುವಂದನಾ ಕಾರ್ಯಕ್ರಮವು ಅರ್ಥಪೂರ್ಣವಾಗಿ ನಡೆಯಿತು. ಆರಂಭದಲ್ಲಿ ಕುಮಾರಿ ವೇದಶ್ರೀ ಬಿ.ಎನ್ "ಗುರ್ವಷ್ಟಕ" ಪ್ರಾರ್ಥನೆಯನ್ನು ಸಲ್ಲಿಸಿದಳು. ನಮ್ಮ ಸಂಘದ ರಾಜ್ಯ ಖಜಾಂಚಿಗಳಾದ ಶ್ರೀ ಜೆ.ಎಮ್. ಜೋಶಿಯವರು ಎಲ್ಲರನ್ನು ಪ್ರೀತಿಯಿಂದ ಸ್ವಾಗತಿಸಿದರು.

ಮುಖ್ಯ ವಕ್ತಾರರಾದ ನಮ್ಮ ಸಂಘದ ಕಾರ್ಯಾಲಯ ಪ್ರಮುಖರಾದ, ಅಪಾರ ಅನುಭವ ಹೊಂದಿರುವ ಹಿರಿಯರಾದ ಶ್ರೀ ಜಿ.ಎಸ್. ಕೃಷ್ಣಮೂರ್ತಿಯವರು ಪ್ರಸ್ತುತ ಸನ್ನಿವೇಶದಲ್ಲಿ ಶಿಕ್ಷಕರ ಪಾತ್ರವೇನು? ಮತ್ತು ವೇದವ್ಯಾಸರ ಅಪಾರವಾದ ಸಾಧನೆ, ಅವರ ಆದರ್ಶಗಳನ್ನು ವಿವರಿಸಿದರಲ್ಲದೇ, ಆಧುನಿಕ ಸಮಾಜದಲ್ಲಿ ಜೀವನ ನಿರ್ವಹಣೆಗೆ ಶಿಕ್ಷಕರಿಗೆ ಆರ್ಥಿಕ ಶಕ್ತಿ ಇರಬೇಕಾದುದು ವಾಸ್ತವ ಸತ್ಯ. ಆದರೆ ಜೀವನದಲ್ಲಿ ಹಣ ಸಂಪಾದನೆಯು ಮಿತಿ ಮೀರಬಾರದು. ನಮ್ಮ ಕೊನೆಯ ಲಕ್ಷ್ಯ ಆತ್ಮ ತತ್ವದ ವಿವೇಚನೆ, ಮಾನವ ಜನ್ಮದ ಸಾರ್ಥಕತೆ. ಈ ಹಿನ್ನೆಲೆಯಲ್ಲಿ ಶಿಕ್ಷಕರು ಗುರುಗಳಾಗಿ ಮಕ್ಕಳಿಗೆ ಜ್ಞಾನವನ್ನು ಧಾರೆಯೆರೆದು, ಅವರು ಮುಂದೆ ಸತ್ಪ್ರಜೆಗಳಾಗುವಂತೆ ಕಾರ್ಯನಿರ್ವಹಿಸಬೇಕೆಂದು ಕರೆ ನೀಡಿದರು.

ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಿದಾನಂದ ಪಾಟೀಲ್‌ರವರು ಶ್ರೀಯುತ ಜಿ.ಎಸ್ ಕೃಷ್ಣಮೂರ್ತಿಯವರು ಇಷ್ಟು ಇಳಿವಯಸ್ಸಿನಲ್ಲಿ ಆನ್‌ಲೈನ್ ದ್ವಾರ ನಮಗೆ ಮಾರ್ಗದರ್ಶನ ಮಾಡಿರುವುದು ತುಂಬಾ ಶ್ರೇಷ್ಠವಾದ ಹಾಗೂ ನಾವೆಲ್ಲರೂ ಅನುಕರಣೆ ಮಾಡಬೇಕಾದ ಕಾರ್ಯ. ನಮ್ಮೆಲ್ಲ ಕಾರ್ಯಕರ್ತ ಬಂಧುಗಳಿಗೆ ನವಚೈತನ್ಯವನ್ನು ತುಂಬಿದ್ದಾರೆ. ಅವರ ಈ ಉತ್ಸಾಹ, ಸಂಘಟನೆ, ಶಿಕ್ಷಕ, ಶಿಕ್ಷಣ, ರಾಷ್ಟ್ರೀಯ ಚಿಂತನೆಗಳ ಬಗ್ಗೆ ಅವರಿಗಿರುವ ಕಾಳಜಿಯನ್ನು ತೋರಿಸುತ್ತದೆ ಎಂದು ಅಭಿಪ್ರಾಯ ಪಟ್ಟರು. ಸಂಘದ ಸಹ ಕಾರ್ಯದರ್ಶಿಗಳಾದ ಶ್ರೀ ಗಂಗಾಧರಾಚಾರಿಯವರು ಮಾತನಾಡುತ್ತಾ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಈ ರೀತಿಯ ಗುರುವಂದನಾ ಕಾರ್ಯಕ್ರಮ ನಡೆದಿದೆ. ಇನ್ನು ಮುಂದೆಯು ನಡೆಯಲಿದೆ. ನಾವು ಆಯೋಜಿಸುತ್ತಿರುವ ಈ ರೀತಿಯ ರಚನಾತ್ಮಕ ಕಾರ್ಯಕ್ರಮಗಳಿಗೆ ಪೂಜ್ಯ ಕೈ. ನರಹರಿಯವರು ಹಾಗೂ ಇನ್ನೂ ಮುಂತಾದ ಹಿರಿಯರ ಮಾರ್ಗದರ್ಶನವೇ ಮೂಲ ಕಾರಣ. ಇಂದು ನಮ್ಮ ರಾಷ್ಟ್ರೀಯ ಚಿಂತನೆಗೆ ವಿಶೇಷ ಮಹತ್ವ ನೀಡುವ ಸಂಘವನ್ನು ಎಲ್ಲರೂ ಮೆಚ್ಚಿಕೊಳ್ಳುತ್ತಿದ್ದಾರೆ. ಕಾರ್ಯಕರ್ತರಾದ ನಾವು ನಿಸ್ವಾರ್ಥ ಬುದ್ಧಿಯಿಂದ ನಮ್ಮ ಸಂಘಟನೆಯನ್ನು ಬಲಪಡಿಸೋಣ ಎಂಬ ಆಶಯವನ್ನು ವ್ಯಕ್ತಪಡಿಸಿದರು. ಕೊನೆಯಲ್ಲಿ ಬೆಂಗಳೂರು ವಿಭಾಗದ ಪ್ರಮುಖರಾದ ಶ್ರೀ ಮಲ್ಲಿಕಾರ್ಜುನ್ ಜಿ. ಕೂಡಗಿರವರು ಗೌರವಪೂರ್ವಕವಾಗಿ ಎಲ್ಲರನ್ನು ಅಭಿನಂದಿಸಿದರು. ಬೆಂಗಳೂರು ಉತ್ತರ ಜಿಲ್ಲೆಯ ಅಧ್ಯಕ್ಷರಾದ ನಾರಾಯಣಭಟ್, ಸಂಸ್ಕೃತ ಶಿಕ್ಷಕರು ಈ ಗುರುವಂದನಾ ಕಾರ್ಯಕ್ರಮವನ್ನು ಸಂಘಟಿಸಿದ್ದರು. ಅವರ ಧರ್ಮಪತ್ನಿ ಸಂಸ್ಕೃತ ಉಪನ್ಯಾಸಕಿ ಶ್ರೀಮತಿ ಶಾರದಾ ಭಟ್ ಹಾಗೂ ಮಕ್ಕಳಾದ ಕುಮಾರಿ ಬಿ.ಎನ್ ವೇದಶ್ರೀ, ಬಿ.ಎನ್ ಕ್ಷಮಾ ಸಹಕರಿಸಿ ಭಾಗವಹಿಸಿದರು.

# ಗುರುಪರಂಪರೆ ತಿಳಿದವರು ನೈಜ ಗುರುಗಳು : ರಘುನಂದನ ಜೀ



ಹುಬ್ಬಳ್ಳಿ : ಕಠಿಣ ಮತ್ತು ದೊಡ್ಡ ವಿಚಾರವನ್ನು ಶಿಷ್ಯರ ಕೈಗೆ ಸಿಗುವಂತೆ ಸರಳವಾಗಿ, ಅರ್ಥವಾಗುವಂತೆ ಗುರು ಹತ್ತಿರವಿದ್ದು, ನಡೆದುಕೊಂಡು ವಿಷಯಧಾರೆ ಅಥವಾ ಪಾಠಭೋಧನೆ ಮಾಡುವವರಿಗೆ ಗುರು ಎಂದು ಒಪ್ಪಿಕೊಳ್ಳಲಾಗುತ್ತದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ಪ್ರಚಾರಕ ಶ್ರೀ ರಘುನಂದನ ಜೀ ಹೇಳಿದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಧಾರವಾಡ ರವಿವಾರ ಹಮ್ಮಿಕೊಂಡಿದ್ದ ಗುರು ವಂದನಾ ವೆಬಿನಾರ್ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಗತ್ತಿಗೆ ಗುರು-ಶಿಷ್ಯರಿಗೆ ಉತ್ತಮ ಉಧಾಹರಣೆ ಎಂದರೆ ಅದು ವಿವೇಕಾನಂದರು ಮತ್ತು ಪರಮಹಂಸರು ಏಕೆಂದರೆ ಉತ್ತಮ ಬಾಂಧವ್ಯ ಮತ್ತು ಸಾರ್ಥಕ್ಯ ಎಲ್ಲವೂ ಅವರೊಳಗಿತ್ತು. ಗುರುಗಳ ಸಮರ್ಪಣೆ ಭಾವ ನರೇಂದ್ರನಲ್ಲಿ ಇದ್ದುದರಿಂದ ಕೇವಲ ಗುರು ಶರೀರವಲ್ಲ ಅದು ತತ್ವವೂ ಹೌದು ಎನ್ನುವುದನ್ನು ಅವರು ಜಗತ್ತಿಗೆ ಸಾರಿದ್ದಾರೆ ಎಂದು ಹೇಳಿದರು.

ಮಹಾಗುರುಗಳಾದ ಭಗವಾನ ವೇದವ್ಯಾಸರು ಕೇವಲ ಕೃತಿಕಾರರಲ್ಲ ಅವರು ಸಂಕಲನಕಾರರು, ರಚನಕಾರರು, ಪಾತ್ರಧಾರಿಗಳು ಮತ್ತು ಹೆಚ್ಚಿನದಾಗಿ ಗುರುಗಳು ಹೌದು ಇಂತಹ ಗುರುಗಳು ಭಾರತಕ್ಕೆ ಸಿಕ್ಕಿದ್ದು ನಮ್ಮ ಪುಣ್ಯ ಎಂದು ಅವರನ್ನು ಸ್ಮರಿಸಿದರು.

ನಮ್ಮ ದೇಶಕ್ಕೆ ಜೀವನಾಡಿ ಗುರುಪರಂಪರೆ ಇರುವ ಕ್ಷೇತ್ರಗಳಾದ ಈ ಮಠಗಳು ಮಾತ್ರ. ಮಠಗಳ ಈಗಿನ ವಿಸ್ತೃತ ರೂಪವೇ ಶಾಲೆಗಳು, ಸ್ವಾಮೀಜಿಗಳ ಈಗಿನ ವಿಸ್ತೃತ ರೂಪವೇ ಗುರುಗಳು ಎಂದು ತಿಳಿಸಿದರು.

ತಪ್ಪಿದಾಗ ದಾರಿ ತೋರುವವ ಗುರು, ಜೀವನದ ಕೊನೆಯ ಕ್ಷಣದವರೆಗೆ ನಮ್ಮನ್ನು ನಾವು ತಿದ್ದಿಕೊಳ್ಳುವ ಅವಶ್ಯಕತೆ ಇದ್ದು, ಗುರು ಎಂದರೆ ನೆಟ್, ಸೆಟ್, ಟೆಟ್, ಪಿಎಚ್.ಡಿ ಗಳನ್ನು ಪಾಸ್ ಮಾಡಿದರಷ್ಟೆ ಅಲ್ಲ, ಗುರು ಪರಂಪರೆಯನ್ನು ತಿಳಿದುಕೊಂಡಿರಬೇಕು ಎಂದು ಹೇಳಿದರು.

ಈಗಿನ ಕಾಲದ ಶಿಕ್ಷಕರು ಯಾವುದೇ ಹೊಸತನ್ನು ತಿರಸ್ಕರಿಸದೆ ಹಳೆಯ ಗುರು ಪರಂಪರೆ ಅರಿತುಕೊಂಡು ನಾನು ಇನ್ನಷ್ಟು ಉತ್ತಮನಾಗಬೇಕು, ಜೊತೆಗೆ ವಿದ್ಯಾರ್ಥಿಗಳಿಗೆ ಸಹಕಾರ ಮತ್ತು ಉತ್ತಮ ಶಿಕ್ಷಣ ನೀಡುತ್ತ ಹೋದಂತೆ ಗುರುವಿನ ಗುರುತ್ವವು ಹೆಚ್ಚಾಗುತ್ತಾ ಹೋಗುತ್ತದೆಂದು ತಿಳಿದಿರಬೇಕು ಎಂದರು.

ಸತ್ಯ ಹೇಳುವುದು ಎಲ್ಲಕ್ಕಿಂತ ದೊಡ್ಡ ಮೌಲ್ಯ, ಸತ್ಯ ಹೇಳುವುದರಿಂದ ಮೌಲ್ಯವರ್ಧನೆಯಾಗುತ್ತದೆ. ಇದನ್ನು ಬೆಳೆಸಬೇಕಾದರೆ ಗುರುವಿನ ಪಾತ್ರ ಹೆಚ್ಚಿದೆ. ಹಾಗೂ ಮೌಲ್ಯಗಳು ಆದರ್ಶದಿಂದ ವರ್ಗಾವಣೆಯಾಗುತ್ತವೆಯೇ ಹೊರತು, ಉಪದೇಶದಿಂದಲ್ಲ ಎಂದು ತಿಳಿಸಿದರು. ಕತ್ತಲೆಯನ್ನು ಓಡಿಸುವವ ಗುರು ಹೀಗಿದ್ದಾಗ ಗುರುವಿನ ಬಳಿ ಬೆಳಕು ಮತ್ತು ಪ್ರೀತಿ ಹೆಚ್ಚಿದ್ದಾಗ ವಿದ್ಯಾರ್ಥಿಗಳ ಅಂಧಕಾರವನ್ನು ಓಡಿಸಿ ಅವರನ್ನು ಸನ್ಮಾರ್ಗದಲ್ಲಿ ತರುವ ಕಾರ್ಯ ಮಾಡಬಹುದು ಎಂದರು.

ಗುರು ಎಂಬ ಶಬ್ಧ ದೊಡ್ಡದು, ಭಾರವಾದದ್ದು ಎಂಬ ಅರ್ಥವಿದೆ. ಹೀಗೆ ಇದ್ದ ದೊಡ್ಡದು ಮತ್ತು ಭಾರವಾದದ್ದನ್ನು ಶಿಷ್ಯರಿಗೆ ಗುರುಗಳು ಸರಳ ಮತ್ತು ಹಗುರವಾಗಿ ಹೇಳಿಕೊಡಬೇಕು ಎಂದು ಆಶಿಸಿದರು. ಗುರು ಮತ್ತು ಶಿಷ್ಯರ ಮಧ್ಯೆ ಉತ್ತಮ ಆತ್ಮೀಯತೆ ಇರಬೇಕು. ಗುರುವಿನಲ್ಲಿ ತಾಳ್ಮೆ, ಸ್ವಯಂ ಕಲಿಯುವ, ಪ್ರೀತಿಸುವ ಕಲೆ ಸದಾ ಇರಬೇಕು ಎಂದು ಅರ್ಥೈಸಿದರು.

ಗುರು ಸಮಸ್ಯೆಗಳನ್ನು ಚರ್ಚಿಸದೇ ಸಮಸ್ಯೆಗಳನ್ನು ಬಗೆಹರಿಸಬೇಕು. ಗುರು ಶಿಷ್ಯರ ಬಾಳಿನ ಬೆಳಕಾಗಬೇಕು ಎಂದು ಹೇಳಿದರು. ಕಾರ್ಯಕ್ರಮದ ಕೊನೆಗೆ ಪ್ರಶ್ನಾವಳಿಗೆ ವಕ್ತಾರರು ಉತ್ತರಿಸಿದರು.

ಈ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಅಧ್ಯಕ್ಷರಾದ ಶ್ರೀ ಸಂದೀಪ ಬೂದಿಹಾಳ, ಕಾರ್ಯದರ್ಶಿಗಳಾದ ಶ್ರೀ ಚಿದಾನಂದ ಪಾಟೀಲ, ಧಾರವಾಡ ಜಿಲ್ಲೆಯ ನೂರಾರು ಶಿಕ್ಷಕರು ಈ ವೆಬಿನಾರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಶಿಕ್ಷಕಿ ಜ್ಯೋತಿ ಕದಮ ಸಂಗಡಿಗರು ಪ್ರಾರ್ಥಿಸಿದರು, ಕೆಆರ್‌ಎಂಎಸ್‌ಎಸ್‌ನ ಧಾರವಾಡ ಜಿಲ್ಲಾ ಅಧ್ಯಕ್ಷರಾದ ಶ್ರೀಧರ ಪಾಟೀಲ ಕುಲಕರ್ಣಿ ನಿರೂಪಿಸಿದರು, ಬಸವರಾಜ ದೇವರಮನಿ ವಂದಿಸಿದರು.

# ಕ್ಷಮತಾ ಸೇವಾ ಸಂಸ್ಥೆಯ ವತಿಯಿಂದ ಮಾಸ್ಕ್, ಸ್ಯಾನಿಟೈಸರ್ ವಿತರಣೆ

ಕ್ಷಮತಾ ಸೇವಾ ಸಂಸ್ಥೆಯ ವತಿಯಿಂದ ಧಾರವಾಡ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಎಸ್.ಎಸ್.ಎಲ್.ಸಿ. ಪರೀಕ್ಷಾ ಕೇಂದ್ರದ ಎಲ್ಲಾ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಹಾಗೂ ಅಧಿಕಾರಿಗಳಿಗೆ ಮುಖಗವಸು (ಮಾಸ್ಕ್), ಸ್ಯಾನಿಟೈಸರ್ ಹಾಗೂ ಪರೀಕ್ಷಾ ಕೇಂದ್ರಗಳಿಗೆ ಥರ್ಮಲ್ ಸ್ಕ್ಯಾನರ್‌ಗಳ ವ್ಯವಸ್ಥೆ ಮಾಡಿದ ಪರಿಣಾಮ ಎಸ್.ಎಸ್.ಎಲ್.ಸಿ. ಪರೀಕ್ಷೆಗಳು ಯಶಸ್ವಿಯಾಗಿ ಸಂಪನ್ನಗೊಂಡಿದ್ದು. ಕೇಂದ್ರ ಸಚಿವರಾದ ಸನ್ಮಾನ್ಯ ಶ್ರೀ ಪ್ರಲ್ಹಾದ ಜೋಶಿಯವರಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ ಅಭಿನಂದನಾ ಪತ್ರ ಸಲ್ಲಿಸಲಾಯಿತು, ಈ ಸಂದರ್ಭದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಜೇಷ್ಠ ಪ್ರಚಾರಕರಾದ ಮಾನ್ಯ ಶ್ರೀ ಸು.ರಾಮಣ್ಣನವರು, ರಾಜ್ಯಸಭಾ ಸದಸ್ಯರಾದ ಮಾನ್ಯ ಶ್ರೀ ಈರಣ್ಣ ಕಡಾಡಿ, ಶಾಸಕರಾದ ಮಾನ್ಯ ಶ್ರೀ ಹಾಲಪ್ಪ ಆಚಾರ್ಯ, ವನವಾಸಿ ಕಲ್ಯಾಣದ ಸಂಯೋಜಕರಾದ ಶಾಂತಾರಾಮ ಸಿದ್ದಿ ಹಾಗೂ ಮಾಧ್ಯಮಿಕ ಶಿಕ್ಷಕರ ಸಂಘದ ರಾಜ್ಯ ಅಧ್ಯಕ್ಷರಾದ ಸಂದೀಪ ಬೂದಿಹಾಳ ಉಪಸ್ಥಿತರಿದ್ದರು.



# ಅಭಿನಂದನೆ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ(ರಿ) ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ ಕೋವಿಡ್–19ರ ಮಹಾಮಾರಿಯ ಸಂದರ್ಭದಲ್ಲಿ ನಡೆಯುತ್ತಿರುವ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾಗುತ್ತಿರುವ ಬೆಂಗಳೂರು ಉತ್ತರ ವಲಯ–3 ರ ವಿದ್ಯಾರ್ಥಿಗಳಿಗೆ ಮಾಸ್ಕ್‌ಗಳನ್ನು ವಿತರಿಸಲು ಬೆಂಗಳೂರು ಉತ್ತರ ವಲಯ–3ರ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಡಿ. ಕೃಷ್ಣರವರಿಗೆ ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ ಸಲ್ಲಿಸಲಾಯಿತು. ಮಾಸ್ಕ್‌ಗಳನ್ನು ಕೊಡುಗೆ ನೀಡಿದ ಸಹೃದಯಿ ಕು: ಶೃತಿ ಮಲ್ಲಿಕಾರ್ಜುನ ಕೂಡಗಿರವರು ನಮ್ಮ ಮಾಧ್ಯಮಿಕ ಶಿಕ್ಷಕ ಸಂಘದ ಬೆಂಗಳೂರು ವಿಭಾಗ ಪ್ರಮುಖರಾಗಿರುವ ಶ್ರೀ ಮಲ್ಲಿಕಾರ್ಜುನ. ಜಿ.ಕೂಡಗಿರವರ ಸುಪುತ್ರಿ. ಕು: ಶೃತಿ ಮಲ್ಲಿಕಾರ್ಜುನ ಕೂಡಗಿರವರಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇವೆ.

ವರದಿ : ಎಂ.ವಿ.ಗಂಗಾಧರ ಕಾರ್ಯದರ್ಶಿ ಕ.ರಾ.ಮಾ.ಶಿ.ಸ.





ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆ ಹಾಗೂ ಮೌಲ್ಯಮಾಪನ ಕಾರ್ಯದಲ್ಲಿ ನಿರತರಾಗಿರುವ ಶಿಕ್ಷಕರು, ಅಧಿಕಾರಿಗಳು ಹಾಗೂ ವಿದ್ಯಾರ್ಥಿಗಳಿಗೆ ನಿರಂತರವಾಗಿ ಮುಖಗವಸು (ಮಾಸ್ಕ್), ಸ್ಯಾನಿಟೈಸರ್ ವ್ಯವಸ್ಥೆ ಮಾಡಿದ ಸೇವಾ ಭಾರತಿ ಟ್ರಸ್ಟ್‌ಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ ಅಭಿನಂದನಾ ಪತ್ರ ಸಲ್ಲಿಸಲಾಯಿತು.



ಪದವಿ ಪೂರ್ವ ಶಿಕ್ಷಣ ಇಲಾಖೆ ಧಾರವಾಡ ಜಿಲ್ಲೆಯ ಉಪನಿರ್ದೇಶಕರಾಗಿ ಶ್ರೀ ಚಿದಂಬರ ಕೆ. ರವರು ಇಂದು ದಿನಾಂಕ 13/07/2020, ಸೋಮವಾರದಂದು ಅಧಿಕಾರ ವಹಿಸಿಕೊಂಡರು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘದ ರಾಜ್ಯ ಅಧ್ಯಕ್ಷರಾದ ಡಾ.ರಘು ಅಕಮಂಚಿ, ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಅಧ್ಯಕ್ಷರಾದ ಸಂದೀಪ ಬೂದಿಹಾಳ ಹಾಗೂ ವಿವಿಧ ಪಿಯು ಕಾಲೇಜುಗಳ ಪ್ರಾಚಾರ್ಯರು ಉಪಸ್ಥಿತರಿದ್ದು ಸ್ವಾಗತ ಕೋರಿದರು.

MAG(3)/NPP/26/2018-19 Registered No. RNI 45459/85 Posted at Bangalore PSO Bangalore -560 026

Date of Publishing : 17-07-2020 Date of Posting 20h or 21st of every month Posted at Periodical Rate

# ಖಾಸಗಿ ಶಾಲಾ ಶಿಕ್ಷಕರಿಗೆ ಆಹಾರ ಕಿಟ್ ವಿತರಣೆ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಮಂಡ್ಯ ಹಾಗೂ ಸತ್ಯ ಎಜ್ಯುಕೇಶನ್ ಕಾಂಪಿಟೆನ್ಸಿ ಟ್ರಸ್ಟ್ ಬೆಂಗಳೂರು ವತಿಯಿಂದ ಗುರುವಂದನಾ ಕಾರ್ಯಕ್ರಮ ನಡೆಸಲಾಯಿತು. ಈ ಸಂದರ್ಭದಲ್ಲಿ ಖಾಸಗಿ ಶಾಲಾ ಶಿಕ್ಷಕರಿಗೆ ಆಹಾರ ಕಿಟ್ ವಿತರಿಸಲಾಯಿತು.










**ಗಮನಿಸಿ**

ಶಿಕ್ಷಕ ಸಮಾಚಾರದ ಹೊಸ ಸಂಚಿಕೆಯ ಬಗ್ಗೆ ಅನಿಸಿಕೆ, ಅಭಿಪ್ರಾಯಗಳನ್ನು ಪ್ರತಿ ಸಂಚಿಕೆ 5ನೇ ತಾರೀಖಿನೊಳಗೆ **akss1950@gmail.com Emailಗೆ** ಕಳುಹಿಸಿಕೊಡಿ.

ಉತ್ತಮ ಅನಿಸಿಕೆ, ಅಭಿಪ್ರಾಯವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

**IF UNDELIVERED PLEASE RETURN TO SENDER**

Printed By :
General Secretary,
Karnataka Rajya Madhyamika Shikshaka Sangha ®.)
Published By:
General Secretary,
Karnataka Rajya Madhyamika Shikshaka Sangha (R.)
Owned By :
Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : General Secretary, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com